# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜೂನ್ 26, 2022

ಸಂಪುಟ : 49 ಸಂಚಿಕೆ : 43 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com






# ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ.,

ಆಡಳಿತ ಕಛೇರಿ, ನಂ. 79/2, ರಜತ ಮಹೋತ್ಸವ ಕಟ್ಟಡ, ಪಿ.ಬಿ. ರಸ್ತೆ, ದಾವಣಗೆರೆ-2.


THE DAVANGERE-HARIHARA URBAN SAHAKARA BANK NIYAMITHA


## ಬ್ಯಾಂಕಿನ ಪ್ರಸ್ತುತ ಕಾರ್ಯಕಾರಿ ಮಂಡಲಿ ಸದಸ್ಯರುಗಳು


ಲಿಂ॥ವೇ॥ ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ
ಸಂಸ್ಥಾಪಕರು


ಶ್ರೀ ಎನ್.ಎ. ಮುರುಗೇಶ್
ಅಧ್ಯಕ್ಷರು


ಶ್ರೀ ಎಸ್.ಕೆ. ವೀರಣ್ಣ
ಸಂಸ್ಥಾಪಕ ನಿರ್ದೇಶಕರು, ಪ್ರಸ್ತುತ ಉಪಾಧ್ಯಕ್ಷರು


ಶ್ರೀ ರಮಣ್ ಲಾಲ್ ಪಿ. ಸಂಘವಿ,
ನಿರ್ದೇಶಕರು


ಶ್ರೀ ಕಿರುವಾಡಿ ವಿ. ಸೋಮಶೇಖರ್
ನಿರ್ದೇಶಕರು/ನಿರ್ದೇಶಕರು, ವ್ಯವಸ್ಥಾಪನಾ ಮಂಡಲಿ


ಶ್ರೀ ಎ.ಹೆಚ್. ಕುಬೇರಪ್ಪ
ನಿರ್ದೇಶಕರು/ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಲಿ



ಶ್ರೀಮತಿ ಜಯಮ್ಮ ಪರಶುರಾಮಪ್ಪ
ನಿರ್ದೇಶಕರು


ಶ್ರೀ ಶಂಕರ್ ಖಟಾವ್‌ಕರ್
ನಿರ್ದೇಶಕರು


ಶ್ರೀಮತಿ ಶಶಿಕಲಾ ರುದ್ರಯ್ಯ ಪಿ.ಎಂ.
ನಿರ್ದೇಶಕರು


ಶ್ರೀ ಎಸ್.ಕೆ. ಪ್ರಭು ಪ್ರಸಾದ್
ನಿರ್ದೇಶಕರು



ಶ್ರೀ ಕೆ.ಎಂ. ಜ್ಯೋತಿ ಪ್ರಕಾಶ್
ನಿರ್ದೇಶಕರು


ಶ್ರೀ ನಾಗೇಂದ್ರಚಾರಿ ಬಿ.
ನಿರ್ದೇಶಕರು


ಶ್ರೀ ವೆಂಕಪ್ಪ ಪಿ.ಹೆಚ್.
ನಿರ್ದೇಶಕರು



ಶ್ರೀಮತಿ ಅನಿಲಾ ಇಂದೂಧರ್
ನಿಶಾನಿಮಠ್, ನಿರ್ದೇಶಕರು


ಶ್ರೀಮತಿ ಉಮಾ ವಾಗೀಶ್
ನಿರ್ದೇಶಕರು


ಶ್ರೀ ಕೊಟ್ರೇಶ್ ಎ., ನಿರ್ದೇಶಕರು
(ದಿ. : 21.04.2021 ರಿಂದ)


ಶ್ರೀ ಆರ್.ವಿ. ಶಿರಸಾಲಿಮಠ್
ವೃತ್ತಿಪರ ನಿರ್ದೇಶಕರು


ಶ್ರೀ ಕಿರಣ್ ಆರ್. ಶೆಟ್ಟಿ
ವೃತ್ತಿಪರ ನಿರ್ದೇಶಕರು


ಶ್ರೀ ಜಿ.ಕೆ. ವೀರಣ್ಣ
ವಿಶೇಷ ಆಹ್ವಾನಿತರು


ಶ್ರೀ ಕೆ.ಹೆಚ್. ಶಿವಯೋಗಪ್ಪ
ವಿಶೇಷ ಆಹ್ವಾನಿತರು


ಶ್ರೀ ಕೆ.ಎಂ. ಬಸವರಾಜ್
ವ್ಯವಸ್ಥಾಪನಾ ಮಂಡಲಿ ನಿರ್ದೇಶಕರು


ಶ್ರೀಮತಿ ಜಿ.ಸಿ. ವಸುಂಧರ
ವ್ಯವಸ್ಥಾಪನಾ ಮಂಡಲಿ ನಿರ್ದೇಶಕರು


ಶ್ರೀಮತಿ ಕೆ.ಎಂ. ಶೈಲಾ
ವ್ಯವಸ್ಥಾಪನಾ ಮಂಡಲಿ ನಿರ್ದೇಶಕರು


ಶ್ರೀ ಎಂ. ಶಿವಲಿಂಗಸ್ವಾಮಿ
ಪ್ರಧಾನ ವ್ಯವಸ್ಥಾಪಕರು/ಸಿಇಓ

## ಅಢಾವೆ ಪತ್ರಿಕೆ ದಿನಾಂಕ : 31.03.2022ಕ್ಕೆ ಇದ್ದಂತೆ (2021-2022ನೇ ಸಾಲಿಗೆ)

| 31.03.2021 ರೂ. ಪೈ | ಬಂಡವಾಳ ಮತ್ತು ಜವಾಬ್ದಾರಿಗಳು | | 31.03.2022 ರೂ. ಪೈ |
|---|---|---|---|
| 5,50,54,500-00 | **ಷೇರು ಬಂಡವಾಳ** | | 5,44,53,925-00 |
| 5,50,02,900-00 | ವಿಲೇವಾರಿ ಆದ ಷೇರುಗಳು (ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ) | 5,43,84,875-00 | |
| 51,600-00 | ಸಹ ಸದಸ್ಯತ್ವ ವಿಲೇವಾರಿಯಾಗಿದ್ದು | 61,000-00 | |
| 0-00 | ನಾಮಮಾತ್ರ ಸದಸ್ಯತ್ವ | 8,050-00 | |
| 45,63,54,888-43 | **ಕಾಯ್ದಿಟ್ಟ ಮತ್ತು ಇತರೆ ನಿಧಿಗಳು** | | 51,17,74,652-59 |
| 18,06,93,234-63 | ಕಾಯ್ದೆ ಬದ್ಧ ನಿಧಿ | 19,24,27,149-79 | |
| 5,52,77,353-65 | ಸಂಶಯಾಸ್ಪದ ಸಾಲಗಳ ನಿಧಿ | 6,91,73,301-65 | |
| 1,58,53,795-80 | ಸಾಮೂಹಿಕ ಕಲ್ಯಾಣ ನಿಧಿ | 1,93,45,929-80 | |
| 9,31,991-45 | ಸಿಬ್ಬಂದಿಯವರ ಗ್ರಾಚ್ಯುಟಿ ನಿಧಿ | 9,31,991-45 | |
| 2,22,14,078-20 | ಸಿಬ್ಬಂದಿಯವರ ಕ್ಷೇಮ ನಿಧಿ | 2,54,18,484-20 | |
| 98,57,869-70 | ಲಾಭಾಂಶ ಸಮೀಕರಿಸುವ ನಿಧಿ | 1,14,78,376-70 | |
| 5,01,07,597-00 | ಕಟ್ಟಡ ನಿಧಿ | 5,49,70,798-00 | |
| 2,11,919-00 | ಧರ್ಮಾರ್ಥ ನಿಧಿ | 4,81,132-00 | |
| 74,11,540-00 | ಜ್ಯುಬಿಲಿ ಫಂಡ್ | 90,32,607-00 | |
| 1,02,079-00 | ಸದಸ್ಯರ ಮರಣೋತ್ತರ ನಿಧಿ | 8,146-00 | |
| 3,29,43,877-00 | ಸಂಚಯದ ಮೇಲಿನ ಸವಕಳಿ ನಿಧಿ | 3,29,43,877-00 | |
| 2,05,00,000-00 | ಸಂಚಯ ಏರಿಳಿತ ನಿಧಿ | 2,30,00,000-00 | |
| 85,53,000-00 | ಪ್ರಮಾಣಿತ ಆಸ್ತಿಗಳ ಮೇಲೆ ಕಾಯ್ದಿರಿಸುವಿಕೆ | 1,06,54,000-00 | |
| 73,89,265-00 | ನಿರ್ದೇಶಕರು/ಸಿಬ್ಬಂದಿ ವರ್ಗದವರ ಶೈಕ್ಷಣಿಕ ಅಧ್ಯಯನ ವಿದೇಶ ಪ್ರವಾಸ ನಿಧಿ | 85,22,301-00 | |
| 2,70,75,287-00 | ಕರಡು ಸಾಲದ ನಿಧಿ (ಆದಾಯ ತೆರಿಗೆ ಸೆ.36(1)(8ಎ) | 3,38,33,458-00 | |
| 1,44,18,227-00 | ಆದಾಯ ತೆರಿಗೆ (ಸೆ. 36(1)(8) ರಂತೆ ಕರಡು ಸಾಲದ ನಿಧಿಗೆ ವಿಶೇಷವಾಗಿ ಕಾಯ್ದಿರಿಸಿದ್ದು. | 1,65,84,955-00 | |
| 28,13,774-00 | ಆರಾಧ್ಯ ಆಯುಷ್ಮಾನ್ ನಿಧಿ | 29,68,145-00 | |
| 2,75,57,79,079-91 | **ಠೇವಣಿಗಳು ಮತ್ತು ಇತರೆ ನಿಧಿಗಳು** | | 307,17,81,336-93 |
| 205,66,27,355-80 | **ಗಡುವು ಠೇವಣಿಗಳು** | 233,35,30,688-30 | |
| 2,02,34,88,464-50 | ವ್ಯಕ್ತಿಗಳಿಂದ | 220,93,20,524-30 | |
| 3,31,38,891-30 | ಸಂಘಗಳಿಂದ | 12,42,10,164-00 | |
| 58,45,50,661-59 | **ಉಳಿತಾಯ ಖಾತೆ ಠೇವಣಿಗಳು** | 62,27,12,847-38 | |
| 58,41,29,638-05 | ವ್ಯಕ್ತಿಗಳಿಂದ | 62,22,94,826-04 | |
| 4,21,023-54 | ಸಂಘಗಳಿಂದ | 4,18,021-34 | |
| 11,46,01,062-52 | **ಚಾಲ್ತಿ ಠೇವಣಿಗಳು** | 11,55,37,801-25 | |
| 8,66,46,940-20 | ವ್ಯಕ್ತಿಗಳಿಂದ | 9,22,21,190-54 | |
| 2,79,54,122-32 | ಸಂಘಗಳಿಂದ | 2,33,16,610-71 | |
| 0-00 | **ಸಾಲಗಳು :** | | |
| 0-00 | ಆರ್.ಬಿ.ಐ. ಕೇಂದ್ರ /ರಾಜ್ಯ ಸರ್ಕಾರಗಳಿಂದ ತಂದ ಸಾಲಗಳು | 0-00 | 0-00 |
| 0-00 | ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು | 0-00 | 0-00 |
| 1,18,60,002-00 | ಕೊಡಬೇಕಾದ ಬಡ್ಡಿ (Int. Payable) | | 1,41,07,873-00 |
| 3,48.96,161-80 | ಬರಬೇಕಾದ ಬಡ್ಡಿ (Overdue Int. Reserve) as per Contra | | 2,67,51,740-52 |
| 0-00 | **ಶಾಖೆಗಳ ಲೆಕ್ಕ ಹೊಂದಾಣಿಕೆ (Branch adjustments)** | | 71,050-81 |
| 2,15,14,498-76 | **ಇತರೆ ಜವಾಬ್ದಾರಿಗಳು (Other Liabilities)** | | 2,30,05,852-68 |
| 43,32,548-00 | ಡೆಫರ್ಡ್ ತೆರಿಗೆ ಕೊಡಬೇಕಾದದ್ದು (Defferd Tax Liability) | 43,32,548-00 | |
| 20,24,372-00 | ಟಿ.ಡಿ.ಎಸ್. ಕೊಡಬೇಕಾದ್ದು | 2,78,523-82 | |
| 2,40,000-00 | ಕೊಡಬೇಕಾದ ಆಂತರಿಕ ಲೆಕ್ಕ ಪರಿಶೋಧನಾ ಶುಲ್ಕ | 3,00,000-00 | |
| 3,34,000-00 | ಕೊಡಬೇಕಾದ ಲೆಕ್ಕಪರಿಶೋಧನಾ ಶುಲ್ಕ | 3,34,000-00 | |
| 18,57,761-00 | ಕೊಡಬೇಕಾದ ಲಾಭಾಂಶ | 15,53,646-00 | |
| 13,65,579-56 | ಇತರೆ ಅಮಾನತ್ತು | 19,03,100-56 | |
| 77,00,000-00 | ಸಿಬ್ಬಂದಿಗೆ ಕೊಡಬೇಕಾದ ಎಕ್ಸ್‌ಗ್ರೇಷಿಯಾ | 83,75,000-00 | |
| 6,57,958-98 | ಕೊಡಬೇಕಾದ ಪೇ ಆರ್ಡರ್‌ಗಳು | 8,48,108-98 | |
| 92,054-00 | ಕೊಡಬೇಕಾದ ಡಿ.ಡಿ.ಗಳು | 92,054-00 | |
| 7,68,855-11 | ಎಸ್.ಜಿ.ಎಸ್.ಟಿ. ತೆರಿಗೆ ಕೊಡಬೇಕಾದದ್ದು | | |
| 0-00 | ಸ್ಟ್ಯಾಂಪ್ ತೆರೆಗೆ ಕೊಡಬೇಕಾದದ್ದು | | |
| 9,07,611-00 | ಕೊಡಬೇಕಾದ ಆದಾಯ ತೆರಿಗೆ | | |
| 7,84,941-11 | ಸಿ.ಜಿ.ಎಸ್.ಟಿ. ತೆರಿಗೆ ಕೊಡಬೇಕಾದದ್ದು | 6,16,331-66 | |
| 4,48,818-00 | ಷೇರು ಅಮಾನತ್ ಖಾತೆ | 10,739-00 | |
| 0-00 | ಅಮಾನತ್ ಖಾತೆ | 27,61,398-00 | |
| 1,000-00 | ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆ | 7,70,347-66 | 1,000-00 |
| | ಷೇರು ಹಣ ಕಾಯ್ದಿರಿಸಿದ್ದು | 4,31,018-00 | |
| 16,35,051-32 | **ದುರುಪಯೋಗದ ಹಣ ವಸೂಲಾತಿಗಾಗಿ ಕಾಯ್ದಿರಿಸಿದ್ದು** | 3,99,037-00 | 16,35,051-32 |
| 2,50,204-00 | **ಮಾಜಿ ಕಾರ್ಯದರ್ಶಿ ಬಿ. ವೇಮಾರೆಡ್ಡಿ ಅವರಿಂದ 1995-96ನೇ ಸಾಲಿನ ಹಣ ಕಾಯ್ದಿರಿಸಿದ್ದು** | | 2,50,204-00 |
| 4,32,28,456-16 | **ಲಾಭ-ನಷ್ಟದ ಖಾತೆಯಿಂದ** | | 5,13,11,000-79 |
| 4,25,76,579-94 | ಹಿಂದಿನ ವರ್ಷದ ಲಾಭ | 4,32,28,456-16 | |
| 4,25,76,579-94 | ವಿನಿಯೋಗಿಸಿದ್ದು | 4,32,28,456-16 | |
| 4,32,28,456-16 | ಈ ಸಾಲಿನ ನಿವ್ವಳ ಲಾಭ (ಲಾಭ-ನಷ್ಟ ಖಾತೆಯಿಂದ) | 5,13,11,000-79 | |
| 3,38,05,73,842-38 | **ಒಟ್ಟು ರೂ.** | | 375,51,43,687-64 |
| 1,06,20,500-00 | **ವಹಿಸಿಕೊಂಡ ನಿರ್ದಿಷ್ಟ ಜವಾಬ್ದಾರಿಗಳು (Contingent Liabilities)** | | 61,56,500-00 |
| 31,20,254-36 | **ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್ (DEAF A/C)** | | 33,18,074-06 |
| 1,37,40,754-36 | ಒಟ್ಟು ರೂ. | | 94,74,574-06 |

| 31.03.2021 ರೂ. ಪೈ | ಆಸ್ತಿ ಮತ್ತು ಸ್ಥಿರ ಸ್ವತ್ತುಗಳು | | 31.03.2022 ರೂ. ಪೈ |
|---|---|---|---|
| 5,12,89,944-92 | ನಗದು ಹಣ & ಆರ್.ಬಿ.ಐ. ಮತ್ತು ಎಸ್.ಬಿ.ಐ. ಬ್ಯಾಂಕುಗಳಲ್ಲಿರುವ ಶಿಲ್ಕು | | 8,01,91,153-92 |
| 3,93,11,991-00 | ನಗದು | 7,04,95,966-00 | |
| 34,78,968-17 | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 14,99,492-17 | |
| 84,92,085-75 | ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಮತ್ತು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ | 81,95,695-75 | |
| 6,900-00 | ಎ.ಟಿ.ಎಂ. ನಲ್ಲಿರುವ ನಗದು ಹಣ | 0-00 | |
| 44,95,65,356-20 | **ಇತರೆ ಬ್ಯಾಂಕುಗಳ ಶಿಲ್ಕು** | 24,32,00,365-25 | 44,23,06,577-29 |
| 18,26,59,144-16 | ಚಾಲ್ತಿ ಠೇವಣಿ | 19,19,06,212-04 | |
| 25,69,06,212-04 | ಗಡುವು ಠೇವಣಿ | 72,00,000-00 | |
| 1,00,00,000-00 | ಫಿಕ್ಸ್ ಮೆಚ್ಯುರಿಟಿ ಪ್ಲಾನ್‌ನಲ್ಲಿ/ಲಿಕ್ವಿಡ್ ಫಂಡ್ | | |
| 56,71,40,111-00 | **ಸಂಚಯಗಳು :** | | 65,47,64,001-00 |
| 56,71,40,111-00 | **ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆಗಳಲ್ಲಿ** | 65,47,64,001-00 | |
| 56,71,40,111-00 | ಪುಸ್ತಕದ ಬೆಲೆ | 65,47,64,001-00 | |
| 56,05,80,000-00 | ಮುಖಬೆಲೆ | 65,20,80,000-00 | |
| 57,56,46,985-00 | ಮಾರುಕಟ್ಟೆ ಬೆಲೆ | 64,59,19,731-00 | |
| 31,000-00 | **ಇತರೆ ಸಹಕಾರಿ ಸಂಘಗಳ ಷೇರುಗಳಲ್ಲಿ** | | 31,000-00 |
| 30,000-00 | ದಾವಣಗೆರೆ ಡಿಸಿಸಿ ಬ್ಯಾಂಕ್‌ನಲ್ಲಿ ಷೇರು ಹಣ | 30,000-00 | |
| 1,000-00 | ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ | 1,000-00 | |
| 2,23,54,04,089-08 | **ಸಾಲ ಮತ್ತು ಮುಂಗಡಗಳು** | | 250,19,65,011-69 |
| 86,35,13,821-73 | **ಅಲ್ಪಾವಧಿಯ ಸಾಲಗಳು:** | 97,53,51,300-03 | |
| 0-00 | ಬಿಲ್‌ಗಳ ಸೋಡಿ ಮಾಡಿದ್ದು | | |
| 79,56,93,309-91 | ಕ್ಯಾಷ್ ಕ್ರೆಡಿಟ್, ಓವರ್ ಡ್ರಾಫ್ಟ್ & ಸಾಲಗಳು ಬೇಡಿಕೆಯ ಮೇಲೆ ಬರಬೇಕಾದ್ದು | 90,70,72,682-18 | |
| 6,74,77,806-70 | ಸಾಲಗಳು ಇತರೆ ಸುಸ್ಪಷ್ಟ ಆಧಾರದ ಮೇಲೆ | 6,79,86,851-00 | |
| 3,42,705-12 | ಆಧಾರ ರಹಿತ ಸಾಲಗಳು (ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ರೂ. 3,50,88,505-50) | 2,91,766-85 | |
| 99,08,25,477-71 | **ಮಧ್ಯಮಾವಧಿ ಸಾಲಗಳು:** | 109,16,40,336-08 | |
| 97,76,51,871-00 | ಇದರಲ್ಲಿ ಸುಸ್ಪಷ್ಟ ಆಧಾರಗಳ ಮೇಲೆ | 107,64,19,117-55 | |
| 1,312,73,606-71 | ಆಧಾರ ರಹಿತ ಸಾಲಗಳು (ಮೇಲ್ಕಂಡ ಸಾಲಗಳಲ್ಲಿ ಸುಸ್ತಿ ರೂ. 4,13,81,732-46) | 1,52,21,218-53 | |
| 38,10,64,789-64 | **ದೀರ್ಘಾವಧಿ ಸಾಲಗಳು :** | 43,49,73,375-58 | |
| 38,10,64,789-64 | ಇದರಲ್ಲಿ ಸುಸ್ಪಷ್ಟ ಆಧಾರಗಳ ಮೇಲೆ | 43,49,73,375-58 | |
| | ಆಧಾರ ರಹಿತ ಸಾಲಗಳು (ಮೇಲ್ಕಂಡ ಸಾಲಗಳ ಮೇಲೆ ಸುಸ್ತಿ ರೂ. 37,82,365-76) | | |
| 0-00 | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದ ಬಿಲ್ಲುಗಳು** | | 0-00 |
| 1,51,955-07 | **ಶಾಖೆಗಳ ಲೆಕ್ಕ ಹೊಂದಾಣಿಕೆ :** | | 0-00 |
| 2,35,93,316-98 | **ನಿಶ್ಚಿತ ಆಸ್ತಿಗಳು:** | | 2,46,80,398-72 |
| 1,66,41,773-64 | ಪ್ರಿಮಿಸಿಸ್ (ಸವಕಳಿ ಕಳೆದ ನಂತರ) | 1,91,99,133-18 | |
| 72,56,953-39 | ನಿವೇಶನ ಮತ್ತು ಕಟ್ಟಡಗಳು | 1,01,34,861-39 | |
| 55,43,554-12 | ಪೀಠೋಪಕರಣಗಳು | 51,17,703-66 | |
| 3,714-36 | ವಾಚನಾಲಯ & ಪುಸ್ತಕಗಳು | 3,157-36 | |
| 28,708-00 | ಜೆರಾಕ್ಸ್ ಯಂತ್ರ | 24,402-00 | |
| 14,25,583-88 | ವಾಹನದ ಖಾತೆ | 12,11,745-88 | |
| 19,47,133-04 | ಯಂತ್ರೋಪಕರಣ | 23,12,845-04 | |
| 4,36,126-85 | ಸಿ.ಸಿ. ಕ್ಯಾಮೆರಾ ಮತ್ತು ಬಯೋಮೆಟ್ರಿಕ್ | 3,94,417-85 | |
| 69,51,543-34 | **ಗಣಕಯಂತ್ರಗಳು ಮತ್ತು ಪರಿಕರಗಳು** | 54,81,265-54 | |
| 15,21,946-72 | ಕಂಪ್ಯೂಟರ್ ಹಾರ್ಡ್‌ವೇರ್ | 11,90,934-26 | |
| 8,52,393-52 | ಯು.ಪಿ.ಎಸ್. & ಬ್ಯಾಟರಿ | 10,09,535-18 | |
| 9,80,918-94 | ಸಿ.ಬಿ.ಎಸ್. ವೈರ್ ಲೆಸ್ ಕನೆಕ್ಟಿವಿಟಿ | 7,84,734-94 | |
| 15,98,236-00 | ಸಿಬಿಎಸ್ ಕಂಪ್ಯೂಟರ್ ಹಾರ್ಡ್‌ವೇರ್ | 7,19,533-00 | |
| 19,26,362-16 | ಕಂಪ್ಯೂಟರ್ ಸಾಫ್ಟ್‌ವೇರ್ | 17,41,577-16 | |
| 71,686-00 | ಡಿಜಿಟಲ್ ಸೈನೇಜ್ | 34,951-00 | |
| 1,66,16,652-01 | **ಇತರೆ ಆಸ್ತಿಗಳು** | | 2,25,68,549-18 |
| 2,59,618-00 | ಇತರೆ ಖರ್ಚಿನ ಮುಂಗಡ | 0-00 | |
| 10,000-00 | ದೂರವಾಣಿ ಠೇವಣಿ ಮಾಡಿದ್ದು | 10,000-00 | |
| 1,05,50,597-45 | ಸಂಚಯದ ಮೇಲೆ ಬರತಕ್ಕ ಬಡ್ಡಿ | 1,18,77,318-34 | |
| 7,95,988-34 | ಪುಸ್ತಕ ಮತ್ತು ಫಾರಂ | 8,19,563-24 | |
| 80,720-00 | ಕೆ.ಇ.ಬಿ. ಡಿಪಾಸಿಟ್ | 80,720-00 | |
| 12,00,000-00 | ಎಂಸಿಸಿ 'ಎ'ಬ್ಲಾಕ್ ಶಾಖೆ ಲೀಸ್ ಮುಂಗಡ | 12,00,000-00 | |
| 14,409-88 | ಆರ್.ಬಿ.ಐ.ನಿಂದ ಡೆಫ್ ಹಣ ಬರಬೇಕಾಗಿದ್ದು | 16,059-04 | |
| 9,00,000-00 | ಕಟ್ಟಡದ ಮುಂಗಡ ಹಣ ಪಾವತಿಸಿದ್ದು | 9,00,000-00 | |
| 2,156-00 | ಐ.ಜಿ.ಎಸ್.ಟಿ.ತೆರಿಗೆ ಬರಬೇಕಾದದ್ದು | 2,156-00 | |
| 1,07,463-00 | ಎಸ್.ಜಿ.ಎಸ್.ಟಿ. ತೆರಿಗೆ ಬರಬೇಕಾದದ್ದು | 0-00 | |
| 1,42,535-00 | ಸಿ.ಜಿ.ಎಸ್.ಟಿ.ತೆರಿಗೆ ಬರಬೇಕಾದದ್ದು | 0-00 | |
| 6,36,200-34 | ಸೋಲಾರ್ ಪವರ್ ಪ್ಲಾಂಟ್ | 3,90,120-34 | |
| 3,76,920-00 | ಎ.ಟಿ.ಎಂ. ಯಂತ್ರ & ಕಾರ್ಡ್ಸ್ | 3,06,600-00 | |
| 7,00,000-00 | ಹಬ್ಬದ ಮುಂಗಡ ಬರಬೇಕಾದದ್ದು | 6,50,000-00 | |
| 5,35,044-00 | ಎಕ್ಸ್‌ಗ್ರೇಷಿಯ ಕೇಂದ್ರ ಸರ್ಕಾರದಿಂದ ಬರಬೇಕಾದದ್ದು | 0-00 | |
| 3,05,000-00 | ಖರೀದಿ ಮುಂಗಡ | 9,55,000-00 | |
| 0-00 | ಆಡಳಿತ ಕಛೇರಿ ಕಟ್ಟಡದ ನವೀಕರಣ | 53,61,012-22 | |
| 3,48,96,161-80 | ಬರಬೇಕಾದ ಬಡ್ಡಿ (Interest Receivable) | | 2,67,51,74052 |
| 3,48,96,161-80 | ಸಾಲ ಮತ್ತು ಮುಂಗಡಗಳಿಂದ ಬರಬೇಕಾದ ಬಡ್ಡಿ | 2,67,51,740-52 | |
| 16,35,051-32 | ದುರುಪಯೋಗದ ಹಣ ಬಿ. ಚಿನ್ನಮಸ್ತಾನ ರೆಡ್ಡಿಯಿಂದ ಬರಬೇಕಾದ ಬಾಬ್ತು | | 16,35,051-32 |
| 2,50,204-00 | ಮಾಜಿ ಕಾರ್ಯದರ್ಶಿ ಬಿ. ವೇಮಾರೆಡ್ಡಿ ಇವರಿಂದ ಬರಬೇಕಾದ ಬಾಬ್ತು | | 2,50,204-00 |
| 3,38,05,73,842-38 | **ಒಟ್ಟು ರೂ.** | | 3,75,51,43,687-64 |

(4ನೇ ಪುಟಕ್ಕೆ ಮುಂದುವರೆದಿದೆ)

# ಸುವರ್ಣ ಮಹೋತ್ಸವದಲ್ಲಿ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕ್

**ಇ.ಎಂ. ಮಂಜುನಾಥ**

ಆರ್ಥಿಕವಾಗಿ ಹಿಂದುಳಿದ ಮತ್ತು ಪ್ರತಿಭಾನ್ವಿತ ವ್ಯಾಪಾರಸ್ಥರನ್ನು ಪ್ರೋತ್ಸಾಹಿಸುವ ಸದುದ್ದೇಶದಿಂದ ಸ್ಥಾಪನೆಗೊಂಡಿರುವ ಹಲವಾರು ಸಹಕಾರ ಬ್ಯಾಂಕುಗಳ ಪೈಕಿ 'ಸಹಕಾರ' ಎಂಬ ನಾಲ್ಕು ಅಕ್ಷರಗಳಿಗೆ ಪರಿಪೂರ್ಣತೆಯ ಅರ್ಥ ತಂದುಕೊಡುವಲ್ಲಿ ; ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಕೆಲವೇ ಸಹಕಾರ ಬ್ಯಾಂಕುಗಳಲ್ಲಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಕೂಡಾ ಒಂದು ಎಂದರೆ ಅತಿಶಯೋಕ್ತಿಯಾಗಲಾರದು.

ಕರ್ನಾಟಕದ ಮಧ್ಯ ಬಿಂದು ದಾವಣಗೆರೆಯಲ್ಲಿ 1973ರಲ್ಲಿ ಅಸ್ತಿತ್ವಕ್ಕೆ ಬಂದ ಈ ಬ್ಯಾಂಕು, ಇದೀಗ 50 ನೇ ವರ್ಷಾಚರಣೆಯ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ.

ದಾವಣಗೆರೆ - ಹರಿಹರ ಅರ್ಬನ್ ಇಂಡಸ್ಟ್ರೀಯಲ್ ಎಂಟರ್ ಪ್ರಿನ್ಯೂರ್ಸ್ ಕೋ-ಆಪರೇಟಿವ್ ಬ್ಯಾಂಕ್ ಎಂಬ ನಾಮಾಂಕಿತದಿಂದ ನರಸರಾಜ ರಸ್ತೆಯಲ್ಲಿ ಸ್ಥಾಪನೆಗೊಂಡಿದ್ದ ಈ ಬ್ಯಾಂಕ್ 1976ರಲ್ಲಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಎಂದಾಯಿತು. ಈ ಬ್ಯಾಂಕ್ ಇದೀಗ ಸಾರ್ವಜನಿಕರಿಗೆ ತಾನು ನೀಡುತ್ತಿರುವ ಅತ್ಯುತ್ತಮ ಸೇವೆ, ಠೇವಣಿ ಸಂಗ್ರಹ, ಭದ್ರತೆ, ಲಾಭ ಗಳಿಕೆ ಹೀಗೆ ಎಲ್ಲಾ ವಿಚಾರದಲ್ಲೂ ವಿಶಿಷ್ಟ ಬ್ಯಾಂಕ್ ಎಂಬ ಕೀರ್ತಿಗೆ ಪಾತ್ರವಾಗಿದೆ.

ಕೈಗಾರಿಕಾ ನಗರ ಮತ್ತು ದಕ್ಷಿಣ ಕಾಶಿ ಎಂದು ಹೆಸರು ಪಡೆದಿರುವ ಹರಿಹರದಲ್ಲಿ ದಿನಾಂಕ 30.04.1979ರಂದು ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಉದ್ಘಾಟನೆಗೊಂಡಿತು. ಹರಿಹರದ ನಾಗರಿಕರ ಆರ್ಥಿಕ ಸುಧಾರಣೆಗೆ ಶ್ರಮಿಸುತ್ತಾ ಬಂದಿರುವುದು ಹೆಮ್ಮೆಯ ವಿಷಯ.

**ವಿವಿಧ ಶಾಖೆಗಳ ಉದ್ಘಾಟನೆ :** ದಾವಣಗೆರೆ ನಗರದ ವಿನೋಬನಗರದಲ್ಲಿ ದಿನಾಂಕ 10.02.1992ರಂದು ಬ್ಯಾಂಕಿನ 3ನೇ ಶಾಖೆಯು ಶ್ರೀಶೈಲ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಕರ್ನಾಟಕ ಸರ್ಕಾರದ ಮಂತ್ರಿಗಳಾಗಿದ್ದ ಎಂ.ಪಿ. ಪ್ರಕಾಶ್ ಅವರಿಂದ ಪ್ರಾರಂಭಗೊಂಡಿತು. ತೆಂಗಿನಕಾಯಿ ಈರುಳ್ಳಿ ಮಾರುಕಟ್ಟೆ ಪ್ರದೇಶದಲ್ಲಿ ದಿನಾಂಕ 18.02.1992ರಂದು ಬ್ಯಾಂಕಿನ 4ನೇ ಶಾಖೆಯನ್ನು, ಎಂಸಿಸಿ ಬಿ ಬ್ಲಾಕ್‌ನಲ್ಲಿ ದಿನಾಂಕ 28.12.1994ರಂದು ಬ್ಯಾಂಕಿನ 5ನೇ ಶಾಖೆಯನ್ನು, ಹರಿಹರ ಶಿವಮೊಗ್ಗ ಬಡಾವಣೆಯಲ್ಲಿ ದಿನಾಂಕ 23.05.1995ರಂದು ಬ್ಯಾಂಕಿನ 6ನೇ ಶಾಖೆಯನ್ನು ಹಾಗೂ ದಾವಣಗೆರೆ ಕೆಟಿಜೆ ನಗರದ ಬಡಾವಣೆಯಲ್ಲಿ ಅಲ್ಪಸಂಖ್ಯಾತ ಸಣ್ಣ ವ್ಯಾಪಾರಸ್ಥರ ಅಭಿವೃದ್ಧಿಗಾಗಿ ದಿನಾಂಕ 25.06.1995ರಂದು ಬ್ಯಾಂಕಿನ 7ನೇ ಶಾಖೆಯನ್ನು ಶ್ರೀಶೈಲ ಜಗದ್ಗುರು ಶ್ರೀ ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಅಮೃತ ಹಸ್ತದಿಂದ ನೆರವೇರಿಸಿದ್ದಾರೆ.

ಸಹಕಾರ ಕ್ಷೇತ್ರದ ಭೀಷ್ಮ ಎಂದೇ ಹೆಸರಾಗಿದ್ದ ಲಿಂ. ಶ್ರೀ ಎಸ್. ಕೊಟ್ರಬಸಪ್ಪ ಅವರ ಮಾರ್ಗದರ್ಶನದಲ್ಲಿ ; ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗಾಗಿ ಕರ್ನಾಟಕ ಸರ್ಕಾರದಿಂದ 'ಸಹಕಾರ ರತ್ನ' ಪ್ರಶಸ್ತಿಗೆ ಭಾಜನರಾಗಿದ್ದ ಲಿಂ. ಶ್ರೀ ಎನ್.ಎಂ.ಜೆ.ಬಿ. ಆರಾಧ್ಯ ಅವರು, ತಮ್ಮ ಮಿತ್ರರೊಡಗೂಡಿ ಸ್ಥಾಪಿಸಿದ ಈ ಬ್ಯಾಂಕ್ ಇಂದು ಜನರ ಮನಸ್ಸಿನಲ್ಲಿ ಅಚ್ಚಳಿಯದ ಬ್ಯಾಂಕ್ ಎಂದು ಗುರುತಿಸಿಕೊಂಡಿದೆ.

ದಾವಣಗೆರೆ ಮಾತ್ರವಲ್ಲದೇ, ಕೈಗಾರಿಕಾ ನಗರ - ದಕ್ಷಿಣ ಕಾಶಿ ಎಂದೇ ಹೆಸರಾಗಿದ್ದ ಹರಿಹರದಲ್ಲೂ ಈ ಬ್ಯಾಂಕ್ ತನ್ನ ಶಾಖೆ ಹೊಂದಿದೆ. ವಿವಿಧ ಬಡಾವಣೆಗಳಲ್ಲಿ ಒಟ್ಟು 8 ಶಾಖೆಗಳನ್ನು ಹೊಂದಿರುವ ಬ್ಯಾಂಕ್ ಎಂದರೆ, ಬ್ಯಾಂಕಿನ ಅತ್ಯುತ್ತಮ ಸೇವೆ, ಲಾಭ ಗಳಿಕೆ, ಅತೀ ಹೆಚ್ಚು ಠೇವಣಿ ಸಂಗ್ರಹ, ಕೋಟ್ಯಾಂತರ ರೂ.ಗಳಷ್ಟು ಸಾಲ ವಿತರಣೆಯ ವಿವರಗಳನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ ಎಂದೆನಿಸುತ್ತದೆ.

ಪ್ರತಿಷ್ಠಿತ ಬ್ಯಾಂಕಾಗಿ ರೂಪುಗೊಳ್ಳುವಲ್ಲಿ ಎನ್.ಎಂ.ಜೆ.ಬಿ. ಆರಾಧ್ಯ ಅವರ ಸುಮಾರು ನಾಲ್ಕೂವರೆ ದಶಕಗಳ ಕಾಲ ಅವಿರತವಾಗಿ ಸಲ್ಲಿಸಿದ ಸೇವೆ ಪ್ರತಿಬಿಂಬಿಸುತ್ತದೆ. ಕಠಿಣ ಮತ್ತು ದೃಢ ಸಂಕಲ್ಪದಿಂದ ಬ್ಯಾಂಕಿನ ಶ್ರೇಯೋಭಿವೃದ್ಧಿಗಾಗಿ ಅಹರ್ನಿಶಿ ದುಡಿದಿದ್ದಾರೆ. ಅವರ ಅವಿಸ್ಮರಣೆಯ ಸೇವೆಯಿಂದಾಗಿ ಸಾವಿರಾರು ಜನರು ಸಾಲದ ಸಹಕಾರ





**ನಗರದಲ್ಲಿ ಇಂದು 50ನೇ ವರ್ಷದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ**

**ರಾಜ್ಯದ ಸಹಕಾರ ಬ್ಯಾಂಕುಗಳಲ್ಲಿ ಅತೀ ಹೆಚ್ಚು ಶಾಖೆಗಳನ್ನು ಹೊಂದಿರುವ ಹೆಗ್ಗಳಿಕೆ**

ಪಡೆದು ಬದುಕು ಕಟ್ಟಿಕೊಂಡಿದ್ದಾರೆ : ಪ್ರತಿಷ್ಠಿತ ವ್ಯಾಪಾರಸ್ಥರಾಗಿದ್ದಾರೆ; 75ಕ್ಕೂ ಹೆಚ್ಚು ಜನರು ಉದ್ಯೋಗ ಪಡೆದು ಬದುಕು ಸಾಗಿಸುತ್ತಿದ್ದಾರೆ. ಆ ಮೂಲಕ ಎನ್.ಎ.ಜೆ.ಬಿ. ಆರಾಧ್ಯ ಅವರು ಇಂದು ದೈಹಿಕವಾಗಿ ಇಲ್ಲದಿದ್ದರೂ ಅವರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ.

ಲಿಂ. ಎಸ್. ಕೊಟ್ರಬಸಪ್ಪ ಅವರು ಬ್ಯಾಂಕಿನ ಪ್ರಥಮ ಸಂಸ್ಥಾಪಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ನಂತರದ ಅವಧಿಗಳಲ್ಲಿ ಸುದೀರ್ಘ ಕಾಲ ಎನ್.ಎಂ.ಜೆ.ಬಿ.ಆರಾಧ್ಯ ಅಧ್ಯಕ್ಷರಾಗಿದ್ದರು. ದಿ. ಪೂನಂ ಚಂದ್ ಷಾ, ದಿ.ಎಸ್.ಜಿ. ಸೋಮಶೇಖರಪ್ಪ, ಸಿ.ಎಸ್. ಹನುಮಂತಪ್ಪ, ಟಿ.ಆರ್. ಮರುಳಸಿದ್ದಪ್ಪ, ರಮಣಲಾಲ್ ಪಿ. ಸಂಘವಿ, ಕೃಷ್ಣ ಸಾ ಭೂತೆ ಅವರುಗಳು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದು, ಬ್ಯಾಂಕಿನ ಪ್ರಗತಿಗೆ ಕಾರಣರಾಗಿದ್ದಾರೆ.

ಏತನ್ಮಧ್ಯೆ, ಕಾರಣಾಂತರಗಳಿಂದ ನಿರ್ದೇಶಕ ಮಂಡಳಿಯ ಸದಸ್ಯರಲ್ಲುಂಟಾದ ಒಡಕು ಎರಡು ಗುಂಪುಗಳಾದ ಪರಿಣಾಮ ಬ್ಯಾಂಕಿನ ಆರ್ಥಿಕ ಸ್ಥಿತಿ ಹಿಂದುಳಿಯಿತು. ಇದೇ ಸಂದರ್ಭದಲ್ಲಿ ಬ್ಯಾಂಕಿನ ಇತಿಹಾಸದಲ್ಲೇ ಪ್ರಥಮ ಬಾರಿಗೆ ಚುನಾವಣೆ ನಡೆಯುವಂತಾಯಿತು. ಈ ಹಿನ್ನೆಲೆಯಲ್ಲಿ ಬ್ಯಾಂಕನ್ನು ಉಳಿಸಿ - ಬೆಳೆಸಬೇಕೆನ್ನುವ ಛಲ ತೊಟ್ಟು ಒಂದು ಗುಂಪಿನ ನೇತೃತ್ವ ವಹಿಸಿಕೊಂಡ ಎನ್.ಎಂ.ಜೆ.ಬಿ. ಆರಾಧ್ಯ ಅವರು, ಚುನಾವಣೆಯಲ್ಲಿ ಅಭೂತಪೂರ್ವ ಜಯ ಗಳಿಸಿ ಮತ್ತೆ ಬ್ಯಾಂಕಿನ ಚುಕ್ಕಾಣಿ ಹಿಡಿದರು. ತಮ್ಮ ವೈಯಕ್ತಿಕ ಕೆಲಸ, ಕಾರ್ಯಗಳನ್ನು ಬದಿಗೊತ್ತಿ ಬ್ಯಾಂಕಿನ ಸೇವೆಗೆ ಹೆಚ್ಚು ಸಮಯವನ್ನು ಮೀಸಲಿಟ್ಟು, ಕಠಿಣ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಬ್ಯಾಂಕನ್ನು ಯಥಾಸ್ಥಿತಿಗೆ ತಂದಿದ್ದಲ್ಲದೇ, ಠೇವಣಿ ಸಂಗ್ರಹ ಮತ್ತು ಲಾಭ ಗಳಿಕೆಯಲ್ಲಿ ದುಪ್ಪಟ್ಟು ಮಾಡುವುದರಲ್ಲಿ ಯಶಸ್ವಿಯಾಗಿ ಎಲ್ಲರನ್ನೂ ಆಶ್ಚರ್ಯಗೊಳಿಸಿದರು.

**ಪುತ್ರನ ಸಾರಥ್ಯ :** 2018ರಲ್ಲಿ ಎನ್.ಎಂ.ಜೆ.ಬಿ. ಆರಾಧ್ಯ ಅವರು ಲಿಂಗೈಕ್ಯರಾದ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕ ಮಂಡಳಿಯು ಆರಾಧ್ಯ ಅವರ ಪುತ್ರ ಎನ್.ಎ. ಮುರುಗೇಶ್ ಅವರನ್ನು ಅಧ್ಯಕ್ಷರನ್ನಾಗಿ ಒಮ್ಮತದಿಂದ ಆಯ್ಕೆ ಮಾಡುವುದರ ಮೂಲಕ ಬ್ಯಾಂಕಿನ ಉಸ್ತುವಾರಿಯನ್ನು ವಹಿಸಿಕೊಟ್ಟರು.

ಮುರುಗೇಶ್ ಅವರು ತಮ್ಮ ತಂದೆ ಬ್ಯಾಂಕಿನ ಅಧ್ಯಕ್ಷರಾಗಿದ್ದ ಅವಧಿಯಲ್ಲೇ ಈ ಬ್ಯಾಂಕಿನ ಅತ್ಯಂತ ಕಿರಿಯ ನಿರ್ದೇಶಕ ಎಂಬ ಹೆಗ್ಗಳಿಕೆ ಪಡೆದಿದ್ದರು. ಕ್ರಿಯಾಶೀಲತೆ, ಬ್ಯಾಂಕಿಂಗ್ ಕ್ಷೇತ್ರದ ಸಾಕಷ್ಟು ಮಾಹಿತಿಯನ್ನು ಅರಿತುಕೊಂಡಿದ್ದ ಮುರುಗೇಶ್ ಅವರು, ಬ್ಯಾಂಕನ್ನು ಮುನ್ನಡೆಸಲು ಸಮರ್ಥರು ಎಂಬ ನಿಲುವಿಗೆ ಬಂದ ನಿರ್ದೇಶಕ ಮಂಡಳಿಯು ಅವರನ್ನು ಅವಿರೋಧವಾಗಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

**ಎನ್.ಎ. ಮುರುಗೇಶ್ ಅಧಿಕಾರದ ಚುಕ್ಕಾಣಿ :** ಬ್ಯಾಂಕಿನ ಚುಕ್ಕಾಣಿ ಹಿಡಿದ ಕೇವಲ 4 ವರ್ಷಗಳಲ್ಲಿ ಮುರುಗೇಶ್ ಅವರು ಬ್ಯಾಂಕಿನ ಏಳಿಗೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಒಂದು ಬ್ಯಾಂಕ್ ಕೇವಲ ಹಣಕಾಸಿನ ವ್ಯವಹಾರ ಮಾಡುವುದಲ್ಲ ; ಜೊತೆ-ಜೊತೆಗೆ ಸಾಮಾಜಿಕ ಕ್ಷೇತ್ರದಲ್ಲೂ ತೊಡಗಿಸಿಕೊಳ್ಳುವ ಬಗೆಯನ್ನು ಮುರುಗೇಶ್ ತೋರಿಸಿಕೊಟ್ಟಿದ್ದಾರೆ.

**ಬ್ಯಾಂಕಿನ ಅಭಿವೃದ್ಧಿ :** ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಗ್ರಾಹಕರಿಗೆ ನೀಡುತ್ತಿರುವ ಸೌಲಭ್ಯಗಳಲ್ಲಿ ಬಹುತೇಕವನ್ನು ತಮ್ಮ ಬ್ಯಾಂಕಿನ ಗ್ರಾಹಕರಿಗೆ, ಸಿಬ್ಬಂದಿ ವರ್ಗದವರಿಗೆ ಒದಗಿಸುತ್ತಿರುವ ಕೆಲವೇ ಕೆಲವು ಸಹಕಾರಿ ಬ್ಯಾಂಕುಗಳಲ್ಲಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರಿ ಬ್ಯಾಂಕ್ ಒಂದು ಎಂದು ಎನ್.ಎ. ಮುರುಗೇಶ್ ಸಂತಸ ವ್ಯಕ್ತಪಡಿಸಿದ್ದಾರೆ.

2018ರಲ್ಲಿ ತಾವು ಅಧಿಕಾರ ವಹಿಸಿಕೊಂಡಾಗಿನಿಂದ ಈವರೆಗಿನ ಬ್ಯಾಂಕಿನ ವ್ಯವಹಾರ ಮತ್ತು ಅಭಿವೃದ್ಧಿಯ ವ್ಯತ್ಯಾಸವನ್ನು ವಿವರಿಸಿರುವ ಅವರು ಆಪದ್ಧನ ಮತ್ತು ಇತರೆ ನಿಧಿಗಳು ರೂ. 17.17 ಕೋಟಿಗಳಷ್ಟು ಹೆಚ್ಚಳವಾಗಿದ್ದು ಠೇವಣಾತಿ ಸಂಗ್ರಹಣೆಯಲ್ಲಿ ರೂ. 107.45 ಕೋಟಿಗಳಷ್ಟು ಹೆಚ್ಚಿಗೆ ಸಂಗ್ರಹಣೆ ಮಾಡಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಭದ್ರತೆ ಹಾಗೂ ಇತರೆ ಬ್ಯಾಂಕುಗಳಲ್ಲಿ ರೂ. 18.22 ಕೋಟಿಗಳಷ್ಟು ಹೆಚ್ಚಿನ ಹಣವನ್ನು ಹೂಡಿಕೆ ಮಾಡಲಾಗಿದೆ. 2018ರಲ್ಲಿ 162.53 ಕೋಟಿ ಸಾಲ ನೀಡಲಾಗಿದ್ದು, 31.03.2022ರ ಅಂತ್ಯಕ್ಕೆ 250.19 ಕೋಟಿಗಳಷ್ಟು ಸಾಲಗಳನ್ನು ನೀಡಿದ್ದು, ರೂ. 87.66 ಕೋಟಿಗಳಷ್ಟು ಹೆಚ್ಚಿಗೆ ಸಾಲ ಮತ್ತು ಮುಂಗಡಗಳನ್ನು ನೀಡಲಾಗಿದೆ. ದುಡಿಯುವ ಬಂಡವಾಳ ರೂ. 49.39 ಕೋಟಿಗಳಷ್ಟು ಹೆಚ್ಚಳವಾಗಿದ್ದು, 31.03.2022ರ ಅಂತ್ಯಕ್ಕೆ ಪ್ರಸ್ತುತ ದುಡಿಯುವ ಬಂಡವಾಳವು ರೂ. 372.47 ಕೋಟಿಗಳಷ್ಟು ಇರುತ್ತದೆ. ಕೇವಲ 2 ಅಮಲ್ಜಾರಿ ಪ್ರಕರಣಗಳು ಇರುತ್ತವೆ. ಆದಾಯ ತೆರಿಗೆ ಪಾವತಿಸಿದ ನಂತರ ಕಳೆದ ವರ್ಷ 4.32 ಕೋಟಿ ರೂ. ನಿವ್ವಳ ಲಾಭ ಇದ್ದು, ಈ ವರ್ಷ 5.13 ಕೋಟಿ ರೂ. ಲಾಭ ಗಳಿಸಿದ್ದು ಒಟ್ಟು ಹಿಂದಿನ ವರ್ಷಕ್ಕಿಂತ ಈ ವರ್ಷ 81 ಲಕ್ಷ ಹೆಚ್ಚಿನ ಲಾಭ ಗಳಿಸಿರುವುದು ಬ್ಯಾಂಕಿನ ಇತಿಹಾಸದಲ್ಲೇ ಮೊದಲಾಗಿದೆ ಎಂದು ಅಂಕಿ-ಅಂಶಗಳೊಂದಿಗೆ ತಮ್ಮ ಸಾಧನೆಯನ್ನು ಚಿತ್ರಿಸಿದ್ದಾರೆ.

# ಪೊಲೀಸರ ಕಣ್ತಪ್ಪಿಸಿ ನುಣುಚಿಕೊಂಡ ಶಾಸಕರು

(7ನೇ ಪುಟದಿಂದ) ಭದ್ರತಾ ಸಿಬ್ಬಂದಿಗೆ ಈ ಬಗ್ಗೆ ಯಾವುದೇ ಸುಳಿವು ಇರಲಿಲ್ಲ. ನಂತರ ಭದ್ರತಾ ಸಿಬ್ಬಂದಿ ಈ ಬಗ್ಗೆ ಉನ್ನತ ಅಧಿಕಾರಿಗಳಿಗೆ ತಿಳಿಸಿದರು. ಸ್ವಲ್ಪ ಸಮಯದ ನಂತರ ಇತರೆ ಶಾಸಕರೂ ಕೈ ಕೊಟ್ಟಿರುವುದು ಗೊತ್ತಾಯಿತು ಎಂದವರು ವಿವರಿಸಿದ್ದಾರೆ.

ನಗರಾಭಿವೃದ್ಧಿ ಸಚಿವ ಏಕನಾಥ ಶಿಂಧೆ, ಗೃಹ ಖಾತೆ ಅಧೀನ ಸಚಿವ ಶುಭುರಾಜ್ ದೇಸಾಯಿ, ಸಚಿವರಾದ ಅಬ್ದುಲ್ ಸತ್ತಾರ್ ಹಾಗೂ ಸಂದೀಪನ್ ಭುಮ್ರೆ ಅವರು ವಿಶೇಷ ಭದ್ರತೆ ಹೊಂದಿದ್ದರು. ಇವರಿಗೆ ವಿಶೇಷ ಪೊಲೀಸ್ ಅಧಿಕಾರಿಗಳಿಂದ ಭದ್ರತೆ ನೀಡಲಾಗಿತ್ತು. ಆದರೆ, ಆ ಅಧಿಕಾರಿಗಳಿಗೆ ವೈಯಕ್ತಿಕ ವೇಳಾಪಟ್ಟಿ ಗೊತ್ತಿರಲಿಲ್ಲ.

ಭದ್ರತೆ ನೀಡುತ್ತಿದ್ದ ಪೊಲೀಸ್ ಅಧಿಕಾರಿಗಳು ತಮ್ಮ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡುವಷ್ಟರಲ್ಲಿ ಈ ಶಾಸಕರು ರಾಜ್ಯದ ಗಡಿ ದಾಟಿಯಾಗಿತ್ತು. ಕೆಲವೇ ಗಂಟೆಗಳಲ್ಲಿ ಇಡೀ ಪ್ರಕರಣ ಮುಗಿದಿತ್ತು. ಭದ್ರತೆ ನೀಡುತ್ತಿದ್ದ ಅಧಿಕಾರಿಗಳಿಗೆ ಶಾಸಕರ ಪಲಾಯನ ಯೋಜನೆ ಗೊತ್ತಿರಲಿಲ್ಲ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಈ ವಿಷಯದಲ್ಲಿ ಗುಪ್ತಚರ ವೈಫಲ್ಯ ಆಗಿಲ್ಲ. ಶಿವಸೇನೆಯ ಶಾಸಕರು ಪ್ರತಿಪಕ್ಷಗಳ ನಾಯಕರ ಸಂಪರ್ಕದಲ್ಲಿರುವುದರ ಬಗ್ಗೆ ಗುಪ್ತಚರ ಇಲಾಖೆ ಮಾಹಿತಿ ನೀಡಿತ್ತು ಎಂದು ಗೃಹ ಇಲಾಖೆಯ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಈ ಬಗ್ಗೆ ಯಾವುದೇ ಲಿಖಿತ ವರದಿ ನೀಡಿಲ್ಲ. ಆದರೆ, ಮೌಖಿಕವಾಗಿ ಮಾಹಿತಿ ನೀಡಲಾಗಿತ್ತು ಎಂದೂ ಅವರು ತಿಳಿಸಿದ್ದಾರೆ.

ಶಿವಸೇನೆಯ ಶಾಸಕರು ರಾಜ್ಯ ಬಿಟ್ಟು ತೆರಳಿದ ಬಗ್ಗೆ ಗುಪ್ತಚರ ಇಲಾಖೆಯು ಮಾಹಿತಿ ನೀಡಲಿಲ್ಲ ಎಂದು ಎನ್.ಸಿ.ಪಿ. ಅಧ್ಯಕ್ಷ ಶರದ್ ಪವಾರ್ ಅವರು ಗೃಹ ಸಚಿವ ದಿಲೀಪ್ ವಲ್ಸೆ ಪಾಟೀಲ್ ಅವರ ಬಳಿ ಆಕ್ಷೇಪಿಸಿದ್ದರು ಎನ್ನಲಾಗಿದೆ. ಪಾಟೀಲ್ ಸಹ ಎನ್.ಸಿ.ಪಿ.ಗೆ ಸೇರಿದವರಾಗಿದ್ದಾರೆ.

# ಎಸ್.ಎಂ.ಕೃಷ್ಣ, ಇನ್ಫೋಸಿಸ್ ಮೂರ್ತಿ, ಪಡುಕೋಣೆಗೆ ಪ್ರಶಸ್ತಿ

(7ನೇ ಪುಟದಿಂದ) 513ನೇ ಜಯಂತಿ ಕಾರ್ಯಕ್ರಮದಲ್ಲಿ ಮೂವರಿಗೂ ತಲಾ 5 ಲಕ್ಷ ರೂ. ನಗದು ಸಹಿತ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೆರವೇರಿಸಿಕೊಡಲಿದ್ದಾರೆ ಎಂದು ಅವರು ಹೇಳಿದ್ದಾರೆ.







ಮೂವರು ಪುರಸ್ಕೃತರ ಪೈಕಿ ಹಿರಿಯರಾದ ಕೃಷ್ಣ ಅವರನ್ನು ಇಂದು ಅವರ ಮನೆಯಲ್ಲಿ ಭೇಟಿಯಾಗಿ, ಕೆಂಪೇಗೌಡ ಜಯಂತಿಗೆ ಆಗಮಿಸಿ ಪ್ರಶಸ್ತಿ ಸ್ವೀಕರಿಸ ಬೇಕೆಂದು ಸರ್ಕಾರದ ಪರವಾಗಿ ಆಹ್ವಾನಿಸಿದರು. ಇದಕ್ಕೆ ಕೃಷ್ಣ ಅವರು ಸಮ್ಮತಿಸಿ, ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಮೂವರೂ ಪುರಸ್ಕೃತರು ಬೆಂಗಳೂರಿನ ಬೆಳವಣಿಗೆಗೆ ಮತ್ತು ಕೀರ್ತಿಗೆ ತಮ್ಮದೇ ಆದ ಅನನ್ಯ ವಿಧಾನಗಳ ಮೂಲಕ ಅನುಪಮ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದರು.

ಸಾಧಕರನ್ನು ಆಯ್ಕೆ ಮಾಡಲು ರಾಜ್ಯ ಸರ್ಕಾರದ ಸ್ಟಾರ್ಟಪ್ ವಿಷನ್ ಗ್ರೂಪ್ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಿತ್ತು.

ಇದರಲ್ಲಿ ಉದ್ಯಮಿ ಮೋಹನದಾಸ್ ಪೈ, ವಿವೇಕಾನಂದ ಯೂತ್ ಮೂವ್ ಮೆಂಟ್ ಸ್ಥಾಪಕ ಆರ್.ಬಾಲಸುಬ್ರಹ್ಮಣ್ಯಂ, ನಿವೃತ್ತ ಐಎಎಸ್ ಅಧಿಕಾರಿ ಎಂ.ಕೆ.ಶಂಕರಲಿಂಗೇಗೌಡ ಅವರು ಸದಸ್ಯರಾಗಿದ್ದರು. ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಆರ್. ವಿನಯದೀಪ್ ಅವರು ಸದಸ್ಯ ಕಾರ್ಯದರ್ಶಿ ಆಗಿದ್ದರು.

(4ನೇ ಪುಟದಿಂದ)

# NOTES TO ACCOUNTS : DISCLOSURE IN FINANCIAL STATEMENTS

**5. Exposures**

*a) Exposure to real estate sector* (Amount in Rs. crore)

| Category | Current year | Previous Year |
|---|---|---|
| a) Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits. | 21.03 | 16.61 |
| b) Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits; | 20.20 | 19.42 |
| Total Exposure to Real Estate Sector | 41.23 | 36.03 |

**6. Concentration of deposits, advances and NPAs**

*a) Concentration of deposits* (Amount in Rs. crore)

| Particulars | Current Year | Previous Year |
|---|---|---|
| Total deposits of the twenty largest depositors | 37.98 | 39.69 |
| Percentage of deposits of twenty largest depositors to totaldeposits of the bank | 12.36 | 14.40 |

*b) Concentration of advances*

(Amount in ₹ crore)

| Particulars | Current Year | Previous Year |
|---|---|---|
| Total advances to the twenty largest borrowers | 72.74 | 59.86 |
| Percentage of advances to twenty largest borrowers to totaladvances of the bank | 29.07 | 26.78 |

*c) Concentration of NPAs*

*Amount in ₹ crore)*

| | Current Year | Previous Year |
|---|---|---|
| Total Exposure to the top twenty NPA accounts | 16.26 | 30.36 |
| Percentage of exposures to the twenty largest NPA exposure to total Gross NPAs. | 94.43 | 86.97 |

**7. Transfers to Depositor Education and Awareness Fund (DEA Fund)**

(Amount in ₹ crore)

| Sr. No. | Particulars | Current Year | Previous Year |
|---|---|---|---|
| i) | Opening balance of amounts transferred to DEA Fund | 0.312 | 0.315 |
| ii) | Add: Amounts transferred to DEA Fund during the year | 0.0198 | 0.05 |
| iii) | Less: Amounts reimbursed by DEA Fund towards claims | - | - |
| iv) | Closing balance of amounts transferred to DEA Fund | 0.3318 | 0.312 |

**8. Other Disclosures**

*a) Business ratios*

| Particular | Current Year | Previous Year |
|---|---|---|
| Interest Income as a percentage to Working Funds | 7.58 | 7.28 |
| i) Non-interest income as a percentage to Working Funds | 0.25 | 0.31 |
| ii) Cost of Deposits | 5.88 | 5.88 |
| iii) Net Interest Margin | 4.90 | 4.42 |
| iv) Operating Profit as a percentage to Working Funds | 1.38 | 1.29 |
| v) Return on Assets | 9.32 | 9.83 |

*b) Provisions and contingencies*

| Provision debited to Profit and Loss Account | Current Year | Previous Year |
|---|---|---|
| i) Provision made towards Income tax | 1.78 | 1.49 |
| ii) Provision for Standard Assets | 0.21 | - |
| iii) Provision for Bad & Doubtful Debts | 0.68 | 0.21 |
| iv) Long Term Advance Income Provision | 0.22 | 0.49 |

*c) Payment of DICGC Insurance Premium* *(Amount in crore)*

| Sr. No. | Particulars | Current Year | Previous Year |
|---|---|---|---|
| i) | Payment of DICGC Insurance Premium | 0.3385 | 0.2989 |
| ii) | Arrears in payment of DICGC premium | -- | - |

| ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|---|---|
| ಶ್ರೀ ಎಂ. ಶಿವಲಿಂಗಸ್ವಾಮಿ | ಶ್ರೀ ಎ.ಹೆಚ್. ಕುಬೇರಪ್ಪ | ಶ್ರೀ ಕಿರುವಾಡಿ ವಿ. ಸೋಮಶೇಖರ್ | ಶ್ರೀ ರಮಣ್ ಲಾಲ್ ಪಿ. ಸಂಘವಿ | ಶ್ರೀ ಎಸ್.ಕೆ. ವೀರಣ್ಣ | ಶ್ರೀ ಎನ್.ಎ. ಮುರುಗೇಶ್ |
| ಪ್ರಧಾನ ವ್ಯವಸ್ಥಾಪಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

## ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ

ನಾವು ದಿ ದಾವಣಗೆರೆ -ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಕೇಂದ್ರ ಕಛೇರಿ ಮತ್ತು 7 ಶಾಖೆಗಳ (ಕ್ರೋಢೀಕೃತ) 2021-22ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಇದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರದ ಪುಸ್ತಕಗಳು ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನಮ್ಮ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆ ಲಗತ್ತಿಸಿರುವ ಆಸ್ತಿ ಮತ್ತು ಲೆಕ್ಕಪತ್ರದ ಜವಾಬ್ದಾರಿ ತಃಖ್ತೆ ಮತ್ತು ಲಾಭ-ನಷ್ಟ ತಃಖ್ತೆಯು ದಿನಾಂಕ : 31.03.2022ಕ್ಕೆ ಇದ್ದಂತೆ ನಮ್ಮ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತವೆ ಎಂದು ದೃಢೀಕರಿಸುತ್ತೇವೆ.

ಸಹಿ/- ಚಂದ್ರಮೋಹನ್ & ಕೋಂ., ಚಾರ್ಟರ್ಡ್ ಅಕೌಂಟೆಂಟ್
(FRN 010243S) M.No. 203282 UDIN No.22203282AJIDLP6245

ದಾವಣಗೆರೆ. ದಿನಾಂಕ : 20.05.2022

**ವಿಶೇಷ ಸೂಚನೆ : ಬ್ಯಾಂಕಿನ 2021-2022ನೇ ಸಾಲಿನ 50ನೇ ವಾರ್ಷಿಕ ಮಹಾಸಭೆಯನ್ನು ಈ ದಿನ ಬೆಳಿಗ್ಗೆ 11.00 ಘಂಟೆಗೆ ತ್ರಿಶೂಲ್ ಕಲಾ ಭವನದಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ತಮ್ಮ ಗುರುತಿನ ಚೀಟಿಯೊಂದಿಗೆ ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.**

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಜೂನ್ 26, 2022





ದಾವಣಗೆರೆ, ಜೂ. 25- ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ 'ನಮ್ಮ ದವನ' ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗುವ ಮೂಲಕ ಈ ವರ್ಷದ ಚಾಂಪಿಯನ್ (ವಿನ್ನರ್) ಪ್ರಶಸ್ತಿ ಪಡೆಯುತ್ತಿರುವ ಮಾಹಿತಿ ವಿಜ್ಞಾನ (ಇನ್ಫಾರ್ಮೇಷನ್ ಸೈನ್ಸ್ )ವಿಭಾಗದ ವಿದ್ಯಾರ್ಥಿಗಳು. ಕಾಲೇಜಿನ ಪ್ರಾಚಾರ್ಯ ಡಾ. ಹೆಚ್.ಬಿ. ಅರವಿಂದ್, ಡೀನ್ ಡಾ. ಎಸ್.ಎನ್. ರಮೇಶ್, ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಮತ್ತಿತರರು ಇದ್ದರು.

# ಪೊಲೀಸರ ಕಣ್ತಪ್ಪಿಸಿ ನುಣುಚಿಕೊಂಡ ಶಾಸಕರು

## ಪೊಲೀಸರಿಗೆ ಅರಿವಾಗುವಷ್ಟರಲ್ಲಿ ಮಹಾರಾಷ್ಟ್ರದ ಗಡಿ ದಾಟಿದ್ದ ಶಿವಸೇನೆ ಶಾಸಕರು

ಮುಂಬೈ, ಜೂ. 25 - ಮಹಾರಾಷ್ಟ್ರದ ಶಿವಸೇನೆಯ ಬಹುಸಂಖ್ಯಾತ ಶಾಸಕರು ಬಂಡಾಯ ಎದ್ದಿದ್ದು ಈಗ ಗುವಾಹತಿಯ ಹೋಟೆಲ್‌ಗೆ ತೆರಳಿದ್ದು, ತಮ್ಮದೇ ನಿಜವಾದ ಶಿವಸೇನೆ ಎಂದು ಹೇಳುತ್ತಿದ್ದಾರೆ. ಈ ಶಾಸಕರು ತಮ್ಮ ನಾಯಕರ ಸುಳಿವಿಗೂ ಸಿಗದಂತೆ ಹೊರ ಬಿದ್ದಿದ್ದು ಹೇಗೆ? ಎಂಬ ಪ್ರಶ್ನೆಯೂ ಕೇಳಿ ಬಂದಿದ್ದು, ಇದು ಗುಪ್ತಚರ ವಿಭಾಗದ ವೈಫಲ್ಯ ಎಂಬ ಟೀಕೆಯೂ ಎದುರಾಗಿದೆ.

ಮೊದಲು ಗುಜರಾತ್‌ನ ಸೂರತ್‌ಗೆ ತೆರಳಿದ್ದ ಶಾಸಕರು, ಅಲ್ಲಿಂದ ಗುವಾಹತಿಗೆ ವಿಮಾನದ ಮೂಲಕ ತೆರಳಿದ್ದಾರೆ.

ಶಿವಸೇನೆ ನಾಯಕ ಹಾಗೂ ಸಚಿವ ಏಕನಾಥ್ ಶಿಂಧೆ ಅವರು ತಮ್ಮ ಶಾಸಕರ ಭದ್ರತಾ ಸಿಬ್ಬಂದಿಯಷ್ಟೇ ಅಲ್ಲದೇ, ಪಕ್ಷದ ಕಾರ್ಯಕರ್ತರಿಗೂ ಯಾವುದೇ ಸುಳಿವು ನೀಡದೇ ರಾಜ್ಯದಿಂದ ಹೊರ ಹೋಗುವಲ್ಲಿ ಯಶಸ್ವಿಯಾಗಿದ್ದಾರೆ.

ವೈಯಕ್ತಿಕ ಕೆಲಸಗಳ ನೆಪವೊಡ್ಡಿ ಶಾಸಕರು ಭದ್ರತಾ ಸಿಬ್ಬಂದಿಯಿಂದ ದೂರವಾಗಿದ್ದಾರೆ. ಇದರಿಂದಾಗಿ ಆಡಳಿತ ಯಂತ್ರಕ್ಕೆ ಅವರ ಯೋಜನೆಗಳ ಸುಳಿವು ಸಿಗಲಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕಳೆದ ಜೂನ್ 20ರಂದು ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ತನ್ನ ಐದನೇ ಅಭ್ಯರ್ಥಿ ಗೆಲ್ಲಿಸಿಕೊಳ್ಳಲು ಯಶಸ್ವಿಯಾದಾಗಲೇ ಶಿವಸೇನೆಯಲ್ಲಿ ಸಮಸ್ಯೆ ಇದೆ ಎಂಬುದು ಬಯಲಾಗಿತ್ತು. ಜೂನ್ 21ರಂದು ಬಂಡಾಯ ಬಟಾ ಬಯಲಾಗಿತ್ತು.

ಶಿವಸೇನೆಯ 38 ಬಂಡಾಯ ಶಾಸಕರು ಹಾಗೂ 10 ಸ್ವತಂತ್ರ ಶಾಸಕರು ಗುಜರಾತ್‌ನ ಸೂರತ್‌ಗೆ ತೆರಳಿಯಾಗಿತ್ತು.

ಹಲವಾರು ಶಾಸಕರಿಗೆ ರಾಜ್ಯ ಪೊಲೀಸ್ ಇಲಾಖೆಯಿಂದ ರಕ್ಷಣೆ ನೀಡಲಾಗಿತ್ತು. ಈ ಶಾಸಕರು ವೈಯಕ್ತಿಕ ಕೆಲಸದ ಕಾರಣ ಹೇಳಿ, ಪೊಲೀಸ್ ಸಿಬ್ಬಂದಿ ದೂರ ಇರುವಂತೆ ಹೇಳಿದ್ದರು. ನಂತರ ಪೊಲೀಸರಿಗೆ ಮಾಹಿತಿ ನೀಡದೇ ಸೂರತ್‌ಗೆ ತೆರಳಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮುಂಬೈನ ಶಾಸಕರೊಬ್ಬರು ತಮ್ಮ ಕಚೇರಿಯಲ್ಲಿ ಎಳನೀರು ಕುಡಿಯುತ್ತಾ ಬೆಂಬಲಿಗರ ಜೊತೆ ಸಂವಾದ ನಡೆಸುತ್ತಿದ್ದರು. ಕೆಲವೇ ನಿಮಿಷಗಳಲ್ಲಿ ವಾಪಸ್ಸಾಗುವುದಾಗಿ ಹೇಳಿ ಅವರು ಸೂರತ್‌ಗೆ ತೆರಳಿದ್ದಾರೆ.

ಇನ್ನೊಬ್ಬ ಶಾಸಕರು, ಮನೆಯಲ್ಲಿ ಕೆಲಸ ಇದೆ ಎಂದು ಹೇಳಿ ಹೋಗಿದ್ದಾರೆ. ಹೋಗುವಾಗ ಸೇನೆಯ ಯುವ ಮುಖಂಡರೊಬ್ಬರು ಅವರ ಜೊತೆ ಇದ್ದರು. ಮಾರ್ಗ ಮಧ್ಯದಲ್ಲೇ ಶಾಸಕರು ಸೇನಾ ಮುಖಂಡನನ್ನು ಕಾರಿನಿಂದ ಇಳಿಸಿ ಸೂರತ್‌ಗೆ ತೆರಳಿದ್ದಾರೆ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಇನ್ನೊಬ್ಬ ಶಾಸಕ ಹೊಟೇಲ್‌ನಲ್ಲಿದ್ದರು. ತಮ್ಮ ಭದ್ರತಾ ಸಿಬ್ಬಂದಿಗೆ ಕೆಲಸ ಇದೆ ಎಂದು ಹೇಳಿ ಹೋಟೆಲ್ ಒಳಗೆ ಹೋದವರೇ, ಮತ್ತೊಂದು ಗೇಟಿನಿಂದ ಹೊರಗೆ ಹೋಗಿದ್ದಾರೆ. (5ನೇ ಪುಟಕ್ಕೆ)

# ಬಿಐಇಟಿ ದವನ : ಅಣ್ಣೇಶ್‌ಗೆ 'ದವನ ಕುಮಾರ', ಶುಕ್ಲಾ ವೆರ್ಣೇಕರ್‌ಗೆ 'ದವನ ಕುಮಾರಿ' ಪ್ರಶಸ್ತಿ

ದಾವಣಗೆರೆ, ಜೂ. 25- ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ನಡೆದ ಮೂರು ದಿನಗಳ 'ನಮ್ಮ ದವನ' ಕಾರ್ಯಕ್ರಮ ಶನಿವಾರ ಸಂಜೆ ಸಮಾರೋಪಗೊಂಡಿತು.

ಬಯೋಟೆಕ್ನಾಲಜಿ ವಿಭಾಗದ ಬಿ. ಅಣ್ಣೇಶ್ 'ದವನ ಕುಮಾರ' ಹಾಗೂ ಇನ್‌ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಶುಕ್ಲಾ ಆರ್. ವೆರ್ಣೇಕರ್ 'ದವನ ಕುಮಾರಿ' ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡರು.

ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಇನ್‌ಫಾರ್ಮೇಷನ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಸ್ಪರ್ಧಿಗಳು ಚಾಂಪಿಯನ್ ಆಗಿ ಹೊರ ಹೊಮ್ಮಿದರು. ಕಂಪ್ಯೂಟರ್ ಸೈನ್ಸ್ ವಿಭಾಗದ ಸ್ಪರ್ಧಿಗಳು ದ್ವಿತೀಯ ಸ್ಥಾನ ಪಡೆದುಕೊಂಡರು.

ಪ್ರಶಸ್ತಿ ವಿತರಣೆ ಮಾಡಿ ಮಾತನಾಡಿದ 'ಪದವಿ ಪೂರ್ವ' ಚಿತ್ರದ ನಾಯಕ ನಟ ಪೃಥ್ವಿ ಶಾಮನೂರು ಅವರು, ನಾನು ಕೂಡ 'ನಮ್ಮ ದವನ' ಕಾರ್ಯಕ್ರಮವನ್ನು ತುಂಬಾ ಕುತೂಹಲದಿಂದ ಹಿಂದೆ ಕುಳಿತು ಪ್ರೇಕ್ಷಕನಾಗಿ ವೀಕ್ಷಣೆ ಮಾಡುತ್ತಿದ್ದೆ. ಇದೀಗ ವೇದಿಕೆ ಮೇಲೆ ಅತಿಥಿಯಾಗಿ ಬಹುಮಾನ ವಿತರಣೆ ಮಾಡುವ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ ಎಂದರು.

'ಪದವಿ ಪೂರ್ವ' ಸದಭಿರುಚಿಯ ಚಿತ್ರವಾಗಿದ್ದು, ಸಹೃದಯಿ ಪ್ರೇಕ್ಷಕರು ಚಿತ್ರ ನೋಡಿ ನನ್ನನ್ನು ಆಶೀರ್ವದಿಸಬೇಕೆಂದ ಅವರು, ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ಓದುವುದೇ ಒಂದು ವಿಶೇಷ, ದಾವಣಗೆರೆ ಅಷ್ಟೇ ಅಲ್ಲದೇ ವಿಶ್ವಮಟ್ಟದಲ್ಲಿ ಗುರುತಿಸುವಂತಹ ಕೆಲಸವನ್ನು ಮಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ ಎಂದು ಹೇಳಿದರು.

ನಟಿ ಮಲ್ಲಿಕಾ ಟಿ. ವಸುಪಾಲ್ ಮಾತನಾಡಿ, ವೇದಿಕೆ ಹಂಚಿಕೊಂಡಿರುವುದಕ್ಕೆ ನನಗೆ ತುಂಬಾ ಹೆಮ್ಮೆಯಾಗುತ್ತಿದೆ. ವಿದ್ಯಾರ್ಥಿಗಳು ನಕಾರಾತ್ಮಕ ಧೋರಣೆಗಳಿಂದ ದೂರವಿದ್ದು, ಸಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಮತ್ತೊಬ್ಬ ನಟಿ ಅಂಜಲಿ ಅನಿಶ್ ಮಾತನಾಡಿದರು. ಸಹಾಯಕ ಪ್ರಾಧ್ಯಾಪಕ ಗಣೇಶ್ ಕವನ ವಾಚನ ಮಾಡಿದರು. ಮೊದಲಿಗೆ ಗಣೇಶನನ್ನು (6ನೇ ಪುಟಕ್ಕೆ)

# ವಿದ್ಯಾರ್ಥಿಗಳ ಮನವಿಗೆ ಸ್ಪಂದಿಸಿ ಹಲಸಬಾಳು ಗ್ರಾಮಕ್ಕೆ ಕೆಎಸ್ಸಾರ್ಟಿಸಿ ಬಸ್




ಹರಿಹರ, ಜೂ.25- ತಾಲ್ಲೂಕಿನ ಹಲಸಬಾಳು ಗ್ರಾಮಕ್ಕೆ ಸುಮಾರು 30 ವರ್ಷಗಳ ಕಾಲ ಬಸ್ಸಿನ ಸೌಲಭ್ಯ ಇಲ್ಲದ ಕಾರಣ ಬಸ್ಸಿನ ವ್ಯವಸ್ಥೆ ಕಲ್ಪಿಸಿಕೊಡುವ ಬಗ್ಗೆ ಜಯಕರ್ನಾಟಕ ಸಂಘಟನೆ ವತಿಯಿಂದ ನಿನ್ನೆ ಮನವಿ ಕೊಡಲಾಗಿತ್ತು. ಮನವಿಗೆ ಸ್ಪಂದಿಸಿದ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ದಿ. 25 ರಂದು ಸಂಬಂಧಪಟ್ಟ (6ನೇ ಪುಟಕ್ಕೆ)

# ಜೂ.30ಕ್ಕೆ ಭದ್ರಾ ಕಾಡಾ ಸಭೆ

## ಮುಂಗಾರಿನ ಬೆಳೆಗಳಿಗೆ ನೀರು ಹರಿಸುವ ಬಗ್ಗೆ ಚರ್ಚೆ

ಶಿವಮೊಗ್ಗ, ಜೂ.25- ಭದ್ರಾ ಜಲಾಶಯದಿಂದ ಅಚ್ಚುಕಟ್ಟು ಪ್ರದೇಶಕ್ಕೆ 2022-23ನೇ ಸಾಲಿನ ಮುಂಗಾರಿನ ಹಂಗಾಮಿನ ಬೆಳೆಗಳಿಗೆ ನಾಲೆಗಳಲ್ಲಿ ನೀರು ಹರಿಸುವ ಮತ್ತು ಬೆಳೆ ಕ್ಷೇತ್ರವನ್ನು ಕುರಿತು ತೀರ್ಮಾನ ಕೈಗೊಳ್ಳಲು ಇದೇ ದಿನಾಂಕ 30ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಮಲವಗೊಪ್ಪದಲ್ಲಿರುವ ಭದ್ರಾ ಕಾಡಾ ಕಚೇರಿಯಲ್ಲಿ (2ನೇ ಪುಟಕ್ಕೆ)

# ನೋಟದಿಂದ ಪಾಠದವರೆಗೆ ಎಲ್ಲವೂ ಕಲಾಮಯ

## 'ಶೃಂಗ - 2022' ಉದ್ಘಾಟಿಸಿ ಮಾತನಾಡಿದ ಪದ್ಮಶ್ರೀ ಕಲಾವಿದೆ ಮಂಜಮ್ಮ ಜೋಗತಿ



ದಾವಣಗೆರೆ, ಜೂ. 25 - ನೋಡುವ ನೋಟದಿಂದ ಹಿಡಿದು ಹಾಡು, ಬರವಣಿಗೆ, ಪಾಠ ಕಲಿಯುವುದು - ಕಲಿಸುವುದು, ಒಳ್ಳೆಯ ಮಾತು, ಅಚ್ಚುಕಟ್ಟುತನ ಎಲ್ಲವೂ ಕಲೆಯೇ ಆಗಿದೆ. ಪ್ರತಿಯೊಬ್ಬರಲ್ಲೂ ಇರುವ ಇಂತಹ ಕಲೆಗಳನ್ನು ಅವರವರೇ ಗುರುತಿಸಿ ಬೆಳವಣಿಗೆ ಕಾಣಬೇಕು ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಕಲಾವಿದೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಹೇಳಿದ್ದಾರೆ.

ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಾರ್ಷಿಕೋತ್ಸವ ಕಾರ್ಯಕ್ರಮವಾದ 'ಶೃಂಗ - 2022' ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಎಲ್ಲರ ಆತ್ಮ, ಜೀವ ಹಾಗೂ ಹೃದಯಗಳಲ್ಲಿ ಕಲೆ ಅಡಗಿದೆ. ಈ ಕಲೆ ಸಾಧನೆ ಮಾಡುವವರಿಗೆ ವೇದಿಕೆ ಒದಗಿಸುತ್ತದೆ. ಈ ಕಲೆಯನ್ನು ಬೇರೆ ಯಾರೂ ಗುರುತಿಸುವುದಿಲ್ಲ. ನಮಗೆ ನಾವೇ ಗುರುತಿಸಿಕೊಳ್ಳಬೇಕು, ನಾವೇ ಆ ಕಲೆಯನ್ನು ಬೆಳೆಸಿಕೊಳ್ಳಬೇಕು, ಸಾಧನೆ ಮಾಡಬೇಕು ಎಂದವರು ಕಿವಿಮಾತು ಹೇಳಿದರು.

ಜೀವನದಲ್ಲಿ ಗೆಲುವಷ್ಟೇ ಸಿಗದು, ಸೋಲು - ನೋವುಗಳೂ ಸಿಗುತ್ತವೆ. ಅವುಗಳನ್ನು ಅನುಭವಿಸಿಯೂ ಮುಂದೆ ಹೋಗಬೇಕು. ಆಗ ಮಾತ್ರ ಬದುಕು ಕಟ್ಟಿಕೊಳ್ಳಲು ಸಾಧ್ಯ. ಜೀವನದಲ್ಲಿ ಎಷ್ಟೇ ಮೇಲೆ ಬಂದರೂ ಮೊದಲ ಮೆಟ್ಟಿಲಿನಿಂದ ಇಡುವ ಹೆಜ್ಜೆಗಳನ್ನು ಮರೆಯಬಾರದು ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಲಾವಿದ ಹಾಗೂ ಇಂಜಿನಿಯರ್ ಆರ್.ಟಿ. ಅರುಣ್ ಕುಮಾರ್, ಮನುಷ್ಯ ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಿದ್ದಾನೆ. ಎತ್ತಿನ ಬಂಡಿಯಿಂದ ಆರಂಭವಾಗಿ ರಾಕೆಟ್‌ವರೆಗಿನ ವೇಗ ಪಡೆದುಕೊಂಡಿದ್ದಾನೆ. ಆದರೆ, ಈ ಪ್ರಯಾಣದಲ್ಲಿ ಹೃದಯವಂತಿಕೆ ಮರೆಯಬಾರದು ಎಂದು ಹೇಳಿದರು.

ವಿದ್ಯಾರ್ಥಿಗಳು ಸ್ನೇಹ ಸಂಭ್ರಮಿಸಬೇಕು. ಹೊಸ ಹೊಸ ವಿಷಯಗಳನ್ನು ಕಲಿಯಬೇಕು. ಪಾಠಗಳಿಗೆ ಸಂಬಂಧಿಸಿದಂತೆ ತರಗತಿಗಳಲ್ಲಿ ಕೇಳಿದ್ದಕ್ಕಷ್ಟೇ ಸೀಮಿತವಾಗದೇ, ಹೊಸತನವನ್ನು ಹುಡುಕಬೇಕು ಎಂದು ತಿಳಿಸಿದರು.

ವೇದಿಕೆಯ ಮೇಲೆ ಜೈನ್ ಕಾಲೇಜಿನ ಅಧ್ಯಕ್ಷ ಅಚಲ್ ಚಂದ್, ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಕಾರ್ಯಕ್ರಮದ ಸಂಚಾಲಕ ಡಾ. ರಾಹುಲ್ ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

### ನೋವಿಗೆ ಕಣ್ಣೀರು, ತಪ್ಪಿಗೆ ಪಶ್ಚಾತ್ತಾಪ

ತಮ್ಮ ಜೀವನದ ಕಷ್ಟದ ದಿನಗಳನ್ನು ನೆನಪಿಸಿಕೊಂಡ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ, ಒಂದು ಹೊತ್ತಿನ ಊಟಕ್ಕೂ ಪರದಾಡುವ ಸ್ಥಿತಿ ಇತ್ತು. ಜೋಗತಿಯಾಗಿ ಭಿಕ್ಷೆ ಬೇಡುವ ಸಂದರ್ಭದಲ್ಲಿ ಒಂದು ದಿನ 5-6 ಜನ ತಮ್ಮ ಮೇಲೆ ದೌರ್ಜನ್ಯ ಎಸಗಿದ್ದ ಘಟನೆಯೂ ನಡೆದಿತ್ತು ಎಂದು ನೆನಪಿಸಿಕೊಂಡು ಕಣ್ಣೀರಿಟ್ಟರು.

ಇಂದು ಎಷ್ಟೇ ಉನ್ನತ ಸ್ಥಾನಕ್ಕೆ ತೆರಳಿದರೂ, ಹಿಂದಿನ ಕಷ್ಟದ ದಿನಗಳನ್ನು ಮರೆಯುವುದಿಲ್ಲ. ನಡೆದು ಬಂದ ಹಾದಿಯನ್ನು ನೆನಪಿಟ್ಟುಕೊಂಡಾಗ ಮಾತ್ರ ಬೆಳವಣಿಗೆ ಸಾಧ್ಯ ಎಂದರು.

ಹಾಗೆಯೇ ತಮ್ಮ ಕಲಾ ಜೀವನದ ಗುರುಗಳಾದ ಕಾಳವ್ವ ಜೋಗತಿ ಜೊತೆ ಒಂದು ದಿನ ಜಗಳವಾಡಿ ಅವರಿಗೇ ಹೊಡೆದು ಅವರಿಂದ ದೂರವಾಗಿದ್ದೆ. ನಂತರದಲ್ಲಿ ಸಾಕಷ್ಟು ಕಷ್ಟಗಳನ್ನು ಎದುರಿಸಬೇಕಾಯಿತು. ಒಂಟಿತನಕ್ಕೆ ಸಿಲುಕಬೇಕಾಯಿತು. ನಂತರ ಅವರ ಬಳಿ ತೆರಳಿ ತಪ್ಪಿಗೆ ಪಶ್ಚಾತ್ತಾಪ ಪಟ್ಟು ಕ್ಷಮೆ ಕೇಳಿದ್ದೆ. ಅವರು ನನ್ನನ್ನು ಮತ್ತೆ ಸ್ವೀಕರಿಸಿ ಕಲೆಯನ್ನು ಕಲಿಸಿದರು ಎಂದೂ ತಿಳಿಸಿದರು.

# ಆತ್ಮ ಸಾಕ್ಷಾತ್ಕಾರಕ್ಕೆ ಗುರು ಅತ್ಯಗತ್ಯ

## ರಾಷ್ಟ್ರತಪಸ್ವಿ ಶ್ರೀ ಗುರೂಜಿ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸ್ವಾಮಿ ಧೃತಿಶೀಲಾನಂದ ಜೀ ಅಭಿಮತ



ದಾವಣಗೆರೆ, ಜೂ.25- ಗುರು ಮಾರ್ಗ ದರ್ಶನವಿಲ್ಲದೇ ಸಾಕ್ಷಾತ್ಕಾರ ಸಾಧ್ಯವಾಗದು. ಅಧ್ಯಾತ್ಮಿಕ ಮಾರ್ಗದಲ್ಲಿ ಸಾಗಿ ಆತ್ಮ ಸಾಕ್ಷಾತ್ಕಾರ ಪಡೆಯಲು ಗುರು ಮಾರ್ಗದರ್ಶನ ಅತ್ಯಗತ್ಯ ಎಂದು ಸ್ವಾಮಿ ಧೃತಿಶೀಲಾನಂದ ಜೀ ಹೇಳಿದರು.

ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಶನಿವಾರ ಸಂಜೆ ರಾಷ್ಟ್ರೋತ್ಥಾನ ಬಳಗದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರತಪಸ್ವಿ ಶ್ರೀ ಗುರೂಜಿ ಪುಸ್ತಕ ಲೋಕಾರ್ಪಣೆಗೊಳಿಸಿ, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಗುರುಗಳು ತಿಳಿಸುವ ಸಾಧನಾ ಮಾರ್ಗದಲ್ಲಿ ಸಾಗಲು ವೈಯಕ್ತಿಕ ಜೀವನದಲ್ಲಿ ಶಿಸ್ತು ಅಗತ್ಯ. ಗುರುಗಳು ತಿಳಿಸಿದ್ದನ್ನು ಶಿಷ್ಯ ಕಟ್ಟುನಿಟ್ಟಾಗಿ ಪಾಲಿಸಬೇಕು. ಗುರು ಹೇಳಿದ ಮಾರ್ಗದಲ್ಲಿ ನಡೆಯುವಾಗ ಸಣ್ಣ ತಪ್ಪು ಮಾಡಿದರೂ ಅದರ ಪರಿಣಾಮ ದೊಡ್ಡದಾಗಿರುತ್ತದೆ ಎಂದು ಹೇಳಿದರು.

ಇಂದ್ರಿಯಗಳನ್ನು ನಿಗ್ರಹಿಸಿದಾಗ ಮಾತ್ರ ಸಾಧನೆ ಸಾಧ್ಯ. ಇಂದ್ರಿಯಗಳು ಕೆಲವೊಮ್ಮೆ ಬೇರೆ ಬೇರೆ ದಿಕ್ಕಿಗೆ ಸಾಗುತ್ತವೆ. ಅವುಗಳ ಮೇಲೆ ನಿಯಂತ್ರಣ ಹೊಂದಬೇಕು. ಆಹಾರ ಸೇವನೆ, ಬ್ರಾಹ್ಮೀ ಮುಹೂರ್ತದಲ್ಲಿ ಏಳುವುದು ಸೇರಿದಂತೆ ಹಲವಾರು ಕ್ರಮಗಳಿಂದ ಇಂದ್ರಿಯ ನಿಗ್ರಹ ಸಾಧ್ಯವಾಗುತ್ತದೆ ಎಂದು ಹೇಳಿದರು.

ಪುಸ್ತಕದ ಕುರಿತು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕದ ರಾಜ್ಯ ಸಂಘಟನಾ ಕಾರ್ಯದರ್ಶಿ ನಾರಾಯಣ ಶೇವಿರೆ ಮಾತನಾಡುತ್ತಾ, ಕೆಲವರ ಬದುಕು ಕಥಾವಸ್ತುವಾಗಿದ್ದರೆ, ಮತ್ತೆ ಕೆಲವರದ್ದು ವಿಚಾರ ವಸ್ತುವಾಗಿರುತ್ತದೆ. ಆದರೆ ಗುರೂಜಿಯವರ ಬದುಕು ಅದೆಲ್ಲವನ್ನೂ ಮೀರಿ ಧ್ಯೇಯ ವಸ್ತು ವಾಗಿತ್ತು. ಹೀಗಾಗಿ ಗುರೂಜಿ ಅವರ ಪುಸ್ತಕದಲ್ಲಿ ಧ್ಯೇಯ ವಸ್ತುವಿನ ಮಹತ್ವವಿದೆ ಎಂದು ಹೇಳಿದರು.

ಇದೊಂದು ಬದುಕಿಗೆ ದೃಷ್ಟಿ ನೀಡುವ, ಶಕ್ತಿ ಕೊಡುವ ಪುಸ್ತಕವಾಗಿದೆ. ಎಲ್ಲರ ಮನೆಯಲ್ಲಿಯೂ ಇರಬೇಕಾದ, ಪ್ರತಿಯೊಬ್ಬರೂ ಓದಬೇಕಾದ, ಅಧ್ಯಯನಕ್ಕೆ ಯೋಗ್ಯವಾದ ಪುಸ್ತಕ ಇದಾಗಿದೆ ಎಂದರು.

ವಿದ್ಯಾರ್ಥಿ ದೆಸೆಯಲ್ಲಿಯೇ ಆತ್ಮ ಏಕಾಗ್ರತೆ ಹೊಂದಿದ್ದ ಗುರೂಜಿ ಅವರು ಸ್ನೇಹ, ಅಧ್ಯಯನ ಶೀಲತೆಯಲ್ಲಿ ನಿಪುಣರಾಗಿದ್ದರು. ಪುಸ್ತಕದಲ್ಲಿ ಗುರೂಜಿ ಅವರ ತಂದೆ, ತಾಯಿ ಹಾಗೂ ಗುರು ಈ ಮೂವರ ಪೂರ್ತಿ ಅಧ್ಯಯನವಿದೆ. ಜೀವನದಲ್ಲಿ ಸಾಧಿಸಲಾಗದ ಸಂಗತಿಗಳನ್ನು ಗುರೂಜಿ ಅವರು ಸಂಕಲ್ಪ ಶಕ್ತಿಯಿಂದ ಸಾಧಿಸಿದ್ದರು. ಅಧ್ಯಾತ್ಮಿಕ ಅನುಭೂತಿಯಿಂದ ಸಮಾಜ ಸೇವೆ ಮಾಡಿದ್ದ ಗುರೂಜಿ ಅವರು, 33 ವರ್ಷಗಳ ಕಾಲ ಸರ ಸಂಘಚಾಲಕರಾಗಿ ಸೇವೆ ಸಲ್ಲಿಸಿದ್ದರು. ಅವರ ಜೀವನ ಕ್ರಮ ಇತರರಿಗೆ ಮಾದರಿಯಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಳಗದ ಸದಸ್ಯ ಶಂಭುಲಿಂಗಪ್ಪ, ರಾಷ್ಟ್ರೋತ್ಥಾನ ಬಳಗವು ಕಳೆದ 45 ವರ್ಷಗಳಿಂದ ರಾಜ್ಯದಲ್ಲಿ ವಿವಿಧ ಘಟಕಗಳನ್ನು ಹೊಂದಿ, ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ.

ಉಪನ್ಯಾಸ ಕಾರ್ಯಕ್ರಮಗಳು, ಬೇಸಿಗೆ ಶಿಬಿರ, ರಾಷ್ಟ್ರೀಯ ಕ್ರೀಡೆಗಳಿಗೆ ಪ್ರೋತ್ಸಾಹ, ರಾಷ್ಟ್ರೀಯ ಸಾಹಿತ್ಯವನ್ನು ಜನರಿಗೆ ತಲುಪಿಸುವ ಕಾರ್ಯ ಮಾಡುತ್ತಾ ಬಂದಿದ್ದು, ಇದೀಗ ಮತ್ತೆ ಪುನಶ್ಚೇತನಗೊಂಡಿದೆ ಎಂದು ಹೇಳಿದರು.

# ಎಸ್.ಎಂ.ಕೃಷ್ಣ, ಇನ್ಫೋಸಿಸ್ ಮೂರ್ತಿ, ಪ್ರಕಾಶ್ ಪಡುಕೋಣೆಗೆ ಕೆಂಪೇಗೌಡ ಪ್ರಶಸ್ತಿ

ಬೆಂಗಳೂರು, ಜೂ. 25 - ನಾಡಪ್ರಭು ಕೆಂಪೇಗೌಡರ ಗೌರವಾರ್ಥ ಈ ವರ್ಷದಿಂದ ಸರ್ಕಾರ ಕೊಡಮಾಡುತ್ತಿರುವ 'ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ'ಗೆ ಹಿರಿಯ ರಾಜಕಾರಣಿ ಎಸ್.ಎಂ.ಕೃಷ್ಣ, ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣ ಮೂರ್ತಿ ಮತ್ತು ಖ್ಯಾತ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್.ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಜೂನ್ 27ರಂದು ವಿಧಾನಸೌಧದಲ್ಲಿ ನಡೆಯಲಿರುವ ಕೆಂಪೇಗೌಡರ (6ನೇ ಪುಟಕ್ಕೆ)

# ಅದಾಲತ್‌ನಲ್ಲಿ ಒಂದಾದ ವಿಚ್ಛೇದಿತ ದಂಪತಿ

ದಾವಣಗೆರೆ, ಜೂ.25- ವಿಚ್ಛೇದಿತ ದಂಪತಿಯನ್ನು ಲೋಕ ಅದಾಲತ್ ಮೂಲಕ ಮತ್ತೆ ಒಂದು ಗೂಡಿಸಿದ ಘಟನೆ ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಶನಿವಾರದ ಲೋಕ ಅದಾಲತ್‌ನಲ್ಲಿ ನಡೆಯಿತು.

ದಂಪತಿ ಮತ್ತೆ ಒಂದಾಗಲು ಅವರ 13 ವರ್ಷದ ಮಗಳೂ ಸಹ ಮುಖ್ಯ ಕಾರಣೀಕರ್ತಳಾಗಿದ್ದಳು.

2007ರಲ್ಲಿ ವಿವಾಹವಾಗಿದ್ದ ದಾವಣಗೆರೆಯ ದಂಪತಿ ಮಧ್ಯೆ ವೈಮನಸ್ಸು ಮೂಡಿತ್ತು. 2014ರಲ್ಲಿ, ಪತ್ನಿ ಪತಿ ಸೇರಿದಂತೆ ಅತ್ತೆ, ಮಾವ, ತಂಗಿ ಹಾಗೂ ಮೈದುನನ ಮೇಲೆ ಕಿರುಕುಳ ಪ್ರಕರಣ ದಾಖಲಿಸಿ, ತವರಿಗೆ ಮರಳಿದ್ದರು. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿತ್ತು. ಈ ವೇಳೆ ಪತಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. 2020ರಲ್ಲಿ (5ನೇ ಪುಟಕ್ಕೆ)

# ಜು.3ರಂದು ಬೆಳ್ಳೂಡಿ ಶಾಖಾ ಮಠದ ಐಎಎಸ್ ತರಬೇತಿ ಕೇಂದ್ರ ಉದ್ಘಾಟನೆ

## ಕನಕ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ



ಹರಿಹರ, ಜೂ. 25 - ಕಾಗಿನೆಲೆ ಕನಕ ಗುರುಪೀಠದ ಘೋಷಣೆಯಂತೆ ಯುಪಿಎಸ್‌ಸಿ ಹಾಗೂ ಕೆಪಿಎಸ್‌ಸಿ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ಜು.3ರಂದು ಬೆಳ್ಳೂಡಿ ಶಾಖಾ ಮಠದ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕನಕ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಬೆಳ್ಳೂಡಿ ಸಮೀಪದ ಕನಕ ಗುರು ಶಾಖಾ ಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಇನ್‌ಸೈಟ್ಸ್ ಯುಪಿಎಸ್‌ಸಿ ಇನ್‌ಸ್ಟಿಟ್ಯೂಟ್ ಸಹಯೋಗದೊಂದಿಗೆ ಗುರುಪೀಠದ ಚಂದ್ರಗುಪ್ತ ಮೌರ್ಯ ಸಂಸ್ಥೆಯಿಂದ ಕೇಂದ್ರ ನಡೆಸಲಾಗುವುದು ಎಂದು ಹೇಳಿದರು.

ರಾಜ್ಯದ ಗ್ರಾಮೀಣ ಭಾಗದ ಪ್ರತಿಭಾವಂತ ಆಕಾಂಕ್ಷಿಗಳಿಗೆ ಕಡಿಮೆ ಶುಲ್ಕದಲ್ಲಿ ತರಬೇತಿ ದೊರಕಿಸುವ ಉದ್ದೇಶದಿಂದ ಈ ಕೇಂದ್ರ ಆರಂಭಿಸಲಾಗಿದೆ ಎಂದು ಶ್ರೀಗಳು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಡಿಸಿ, ಎಸ್‌ಪಿ, ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಸಮಾಜದ ಮುಖಂಡರು ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವರು ಎಂದರು.

ಇನ್‌ಸೈಟ್ಸ್ ಸಂಸ್ಥೆಯ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ನಮ್ಮ ಸಂಸ್ಥೆಯಿಂದ ಬೆಂಗಳೂರು, ಮಂಗಳೂರು, ವಿಜಯನಗರ, ದೆಹಲಿ, ಲಕ್ನೋ ಹಾಗೂ ಇತರೆ ನಗರಗಳಲ್ಲಿ ತರಬೇತಿ ಕೇಂದ್ರ ನಡೆಸುತ್ತಿರುವ ಅನುಭವವಿದೆ. ಈಗ ಕಾಗಿನೆಲೆ ಕನಕ ಶಾಖಾ ಮಠದ ಆವರಣದಲ್ಲೂ ಕೇಂದ್ರವನ್ನು ನಡೆಸುತ್ತಿದ್ದೇವೆ ಎಂದರು.

ಮೊದಲ ಬ್ಯಾಚ್ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಅಭ್ಯರ್ಥಿಗಳನ್ನು ಆನ್‌ಲೈನ್ ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗುವುದು. ಗ್ರಾಮೀಣ ಭಾಗದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ನುರಿತ ಶಿಕ್ಷಕರಿಂದ ಆಂಗ್ಲ ಭಾಷೆಯಲ್ಲಿ ಬೋಧನೆ ಇದ್ದು, ಕನ್ನಡ ಭಾಷೆಯಲ್ಲೂ ಮಾರ್ಗದರ್ಶನ ನೀಡಲಾಗುತ್ತದೆ ಎಂದರು.

ಚಂದ್ರಗುಪ್ತ ಮೌರ್ಯ ಸಂಸ್ಥೆಯ ಕಾರ್ಯದರ್ಶಿ ನಿಂಗಪ್ಪ, ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯೆ ಶೃತಿ ಇನಾಂದಾರ್, ಸಂಸ್ಥೆಯ ಟ್ರಸ್ಟಿ ಎಂ.ನಾಗೇಂದ್ರಪ್ಪ, ಇನ್‌ಸೈಟ್ಸ್ ಸಂಸ್ಥೆಯ ಶರತ್, ಮಧು, ಮಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

### ಪಠ್ಯ ಸರಿಪಡಿಸಿ

**ಕನಕದಾಸರು, ಬಸವಣ್ಣ, ಕುವೆಂಪುರವರ ನಿಜ ಜೀವನ ಪಠ್ಯಪುಸ್ತಕದಲ್ಲಿರಬೇಕು. ಸತ್ಯಕ್ಕೆ ದೂರವಾದದ್ದನ್ನು ಮಕ್ಕಳಿಗೆ ತಿಳಿಸುವ ಪ್ರಯತ್ನ ಗೊಂದಲಕ್ಕೆ ಕಾರಣವಾಗುತ್ತದೆ. ಮುಖ್ಯಮಂತ್ರಿ, ಶಿಕ್ಷಣ ಸಚಿವರು ಕೂಡಲೇ ಲೋಪ ಸರಿಪಡಿಸಬೇಕು, ತಪ್ಪಿದಲ್ಲಿ ಹೋರಾಟ ಅನಿವಾರ್ಯವಾಗುತ್ತದೆ ಎಂದು ಕನಕ ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಎಚ್ಚರಿಸಿದ್ದಾರೆ.**


## ಅಕ್ರಮ ಸಕ್ರಮ - ಅವಧಿ ವಿಸ್ತರಣೆ

ದಾವಣಗೆರೆ, ಜೂ.25- ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆ ತಿದ್ದುಪಡಿ ಮಾಡಿದ ತರುವಾಯ ನಮೂನೆ-50-53 ರಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿದವರಿಗೆ ಮತ್ತೊಮ್ಮೆ ನಮೂನೆ-57 ರಲ್ಲಿ ಅರ್ಜಿ ಸಲ್ಲಿಕೆಗೆ ಅವಕಾಶವಿಲ್ಲ ಹಾಗೂ ಸರ್ಕಾರದ ಆದೇಶದ ಸಂಖ್ಯೆ: ಆರ್.ಡಿ 02 ಎಲ್.ಜಿ.ಬಿ 2022(ಭಾ-1) ಜೂ.18 ರ ಆದೇಶದಂತೆ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ನಮೂನೆ-57 ರಲ್ಲಿ ಅರ್ಜಿಯನ್ನು ಸಲ್ಲಿಸಲು ಮೇ 30 ರಿಂದ ಒಂದು ವರ್ಷದ ಅವಧಿಯವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಜನಾಧಿಕಾರ ಸಭೆ

ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ವತಿಯಿಂದ ಇಂದು ಮಧ್ಯಾಹ್ನ 2 ಗಂಟೆಗೆ ಮಿಲಾದ್ ಮೈದಾನದಲ್ಲಿ ಬೃಹತ್ ಜನಾಧಿಕಾರ ಸಮಾವೇಶ ಕಾರ್ಯಕ್ರಮ ನಡೆಯಲಿದೆ.














## ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ಜಡ್ಜ್

ಹೂವಿನಹಡಗಲಿ, ಜೂ.25- ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಸ್ಥಳೀಯ ಜೆ.ಎಂ.ಎಫ್.ಸಿ. ನ್ಯಾಯಾಧೀಶರು ದಿಢೀರ್ ಭೇಟಿ ನೀಡಿ, ಪರಿಶೀಲಿಸಿ ವಿಚಾರಣೆ ನಡೆಸಿದರು.




ಹಡಗಲಿ


ಈ ಸಂದರ್ಭದಲ್ಲಿ ವಿವಿಧ ವಾರ್ಡುಗಳಿಗೆ ಭೇಟಿ ಕೊಟ್ಟ ಅವರು, ರೋಗಿಗಳೊಂದಿಗೆ ಸಮಾಲೋಚನೆ ನಡೆಸಿದರು. ನ್ಯಾಯಾಧೀಶರ ಭೇಟಿಯಿಂದಾಗಿ ಆಸ್ಪತ್ರೆಯ ಸಿಬ್ಬಂದಿಯಲ್ಲಿ ಮಿಂಚಿನ ಸಂಚಲನ ಉಂಟಾಗಿತ್ತು.

ಶಸ್ತ್ರಚಿಕಿತ್ಸಾ ವಿಭಾಗ ಸೇರಿದಂತೆ, ಮಹಿಳಾ ಮತ್ತು ಪುರುಷರ ಶೌಚಾಲಯಗಳನ್ನು ಗಮನಿಸಿದ ಅವರು, ಅಲ್ಲಿನ ಮಲಿನತೆ ಮತ್ತು ಸ್ವಚ್ಛತೆ ಇಲ್ಲದಿರುವುದನ್ನು ಕಂಡು ಸಂಬಂಧಿಸಿದ ಅಧಿಕಾರಿಗಳನ್ನು ಪ್ರಶ್ನಿಸಿ ಮಾಹಿತಿ ಕೇಳಿದರು. ಸ್ಥಳದಲ್ಲೇ ಫಿನಾಯಿಲ್ ತರಿಸಿ ಶೌಚಾಲಯಗಳನ್ನು ಶುಚಿಗೊಳಿಸಲು ಹೇಳಿದರು. ಪ್ರತಿನಿತ್ಯವೂ ಇದೇ ರೀತಿ ಶೌಚಾಲಯಗಳನ್ನು ಶುಚಿಯಾಗಿಟ್ಟು ಕೊಳ್ಳುವಂತೆ ತಾಕೀತು ಮಾಡಿದರು.

ಪ್ರತಿ ನಿತ್ಯ ಆಸ್ಪತ್ರೆಗೆ ಬರುವ ಒಳರೋಗಿಗಳು ಮತ್ತು ಹೊರರೋಗಿಗಳನ್ನು ಭೇಟಿ ಮಾಡಿದರು. 1 ಗಂಟೆಗೂ ಹೆಚ್ಚು ಕಾಲ ವಿವಿಧ ವಾರ್ಡ್ ಗಳು ಹಾಗೂ ವಿಭಾಗಗಳಿಗೆ ತೆರಳಿ ಮಾರ್ಗದರ್ಶನ ಮಾಡಿದರು.

ಆಸ್ಪತ್ರೆಯ ಸಿಬ್ಬಂದಿ ರತ್ನಾಕರ, ವಕೀಲ ಗಂಗಾಧರ ಮತ್ತು ಇತರರು ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte